# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿಇ/714/2016/ಎ.ಆರ್.ಇ-10

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 11/03/2022.

## ವಿಚಾರಣಾ ವರದಿ

**ಉಪಸ್ಥಿತರು:** **ಜಿ. ನಂಜುಂಡಯ್ಯ,**
ಅಪರ ನಿಬಂಧಕರು ವಿಚಾರಣೆಗಳು-10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:** ಆಪಾದಿತ ಸರ್ಕಾರಿ ನೌಕರ **ಶ್ರೀ ಎಲ್.ಹೆಚ್. ನಾವಿ,** ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಲಕೇರಿ ಗ್ರಾಮ ಪಂಚಾಯತಿ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ ರವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:** 1. ಕಂಪ್ಲೆಂಟ್/ಉಪಲೋಕ್/ಬಿಜಿಎಂ-2885/2014/PP ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 24/10/2016.

2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/756/ಗ್ರಾಪಂಕಾ/2016, ಬೆಂಗಳೂರು, ದಿನಾಂಕ: 25/11/2016.

3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-1/ಡಿಇ/714/2016, ಬೆಂಗಳೂರು ದಿನಾಂಕ: 12/12/2016.

* * * *

1. ಈ ದೂರನ್ನು, **ದೂರುದಾರರಾದ ಶ್ರೀ ಅಮರೇಶ್,** ಬಿಂಜಲಭಾವಿ, ಸಿಂದಗಿ ತಾಲ್ಲೂಕು, ವಿಜಾಪುರ ಜಿಲ್ಲೆ ರವರು ಲೋಕಾಯುಕ್ತ ಸಂಸ್ಥೆಗೆ (1) **ಶ್ರೀ ಕಾಸಪ್ಪ ನಿಂಗಪ್ಪ ಮಾದರ,** ಅಧ್ಯಕ್ಷರು, ಕಲಕೇರಿ ಗ್ರಾಮ ಪಂಚಾಯತಿ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ ಮತ್ತು (2) **ಶ್ರೀ ಎಲ್.ಹೆಚ್. ನಾವಿ,** ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಲಕೇರಿ ಗ್ರಾಮ ಪಂಚಾಯತಿ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ ರವರುಗಳ

ವಿರುದ್ಧ ದೂರೊಂದನ್ನು ನೀಡಿ, ಕರ್ನಾಟಕ ಸರ್ಕಾರದ ವತಿಯಿಂದ ಸಂಧಗಿ ತಲ್ಲೂಕಿನ ಕಲಕೇರಿ ಗ್ರಾಮ ಪಂಚಾಯತಿಯಲ್ಲಿ 2012-13, 2013-14ನೇ ಸಾಲಿಗೆ ನರೇಗಾ ಯೋಜನೆಯಡಿಯಲ್ಲಿ ಹಾಗೂ 13ನೇ ಹಣಕಾಸಿನ ಅನುದಾನದಡಿಯಲ್ಲಿ ಹಣವನ್ನು ಬಿಡುಗಡೆ ಮಾಡಲಾಗಿದ್ದು, ಸದರಿ ಹಣವನ್ನು ಎದುರುದಾರರು ದುರುಪಯೋಗಪಡಿಸಿಕೊಂಡಿರುತ್ತಾರೆಂದು ಹಾಗೂ ಹಲವಾರು ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿರುತ್ತಾರೆ. ಆದ್ದರಿಂದ ಎದುರುದಾರರುಗಳ ಮೇಲೆ ಕ್ರಮ ಜರುಗಿಸಬೇಕೆಂದು ಕೋರಿದ್ದು, ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ದೂರುದಾರರು ಮಾಡಿರುವ ಆರೋಪಗಳು ಸುಳ್ಳಿನಿಂದ ಕೂಡಿರುತ್ತದೆಂದು, ನರೇಗಾ ಯೋಜನೆಯಡಿಯಲ್ಲಿ ಹಾಗೂ 13ನೇ ಹಣಕಾಸಿನ ಅನುದಾನದಡಿಯಲ್ಲಿ ಕಾಮಗಾರಿಗಳನ್ನು ಸರ್ಕಾರದ ಮಾರ್ಗಸೂಚಿಯಂತೆ ಕೈಗೊಳ್ಳಲಾಗಿದೆ ಹಾಗೂ ಯಾವುದೇ ಅವ್ಯವಹಾರ ನಡೆದಿರುವುದಿಲ್ಲವೆಂದು ತಿಳಿಸಿರುತ್ತಾರೆ.

3. ಎದುರುದಾರರ ಆಕ್ಷೇಪಣೆ ಮೇರೆಗೆ ದೂರುದಾರರ ಪ್ರತ್ಯುತ್ತರ ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ, ದೂರುದಾರರು ತಮ್ಮ ಪ್ರತ್ಯುತ್ತ್ರವನ್ನು ಸಲ್ಲಿಸಿ, ಎದುರುದಾರರು ಕುಡಿಯುವ ನೀರಿನ ಸ್ಥಾವರವನ್ನು ಸುಸ್ಥಿರವಾಗಿ ಇಡಲಾಗಿದೆ ಎಂದು ಹಾಗೂ ಕುಡಿಯುವ ನೀರಿನ ತೊಂದರೆ ಆಗದಂತೆ ನೋಡಿಕೊಳ್ಳಲಾಗಿದೆ ಎಂದು ತಿಳಿಸಿರುತ್ತಾರೆ. ಆದರೆ, ತಮ್ಮ ಗ್ರಾಮದಲ್ಲಿ ಕುಡಿಯುವ ನೀರಿನ ಸ್ಥಾವರವನ್ನು ನಿರ್ಮಾಣ ಮಾಡಿರುವುದಿಲ್ಲ. ಗ್ರಾಮ ಪಂಚಯತಿಯ ಸಾಮಾನ್ಯ ಸಭೆಯನ್ನು ವರ್ಷಕ್ಕೆ ಎರಡು ಬಾರಿ ಕರೆಯಲಾಗಿತ್ತೆಂದು ತಿಳಿಸಿದ್ದು, ಈ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳು ಇರುವುದಿಲ್ಲ. ಆದರೆ, ಗ್ರಾಮ ಸಭೆ ನಡೆಸೆ ಮನಸ್ಸಿಗೆ ಬಂದಂತೆ ಕ್ರಿಯಾ ಯೋಜನೆಗಳು ಮಾಡಿರುತ್ತಾರೆ. ನಿರುಪಯುಕ್ತ ಆದ ಬಾವಿಗಳನ್ನು ಹಾಗೂ ಕೊಳವೆ ಬಾವಿಗಳನ್ನು ಮುಚ್ಚಬೇಕೆಂದು ಸರ್ಕಾರದ ಆದೇಶವಿದ್ದರೂ ಅಧ್ಯಕ್ಷರು ಈ ಬಾವಿಗಳನ್ನು ಮುಚ್ಚಲು ಬಿಡುತ್ತಿಲ್ಲ. ಸ್ಮಶಾನದ

ಅಭಿವೃದ್ಧಿಯಾಗಲೀ, ಕೃಷಿ ಹೊಂಡವನ್ನು ನಿರ್ಮಿಸುವುದಾಗಲೀ ಯಾವುದೇ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

4. ಈ ಪ್ರಕರಣದ ತನಿಖೆಯನ್ನು ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ವಿಜಾಪುರ ರವರಿಗೆ ವಹಿಸಿದ್ದು, ಸದರಿಯವರು ತನಿಖೆ ಕೈಗೊಂಡು ವರದಿಯನ್ನು ಸಲ್ಲಿಸಿರುತ್ತಾರೆ. ದೂರಿನಂಶಗಳನ್ನು ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಕಡತದಲ್ಲಿ ಹಾಜರುಪಡಿಸಲಾಗಿರುವ ದಾಖಲೆಯನ್ನು, ತನಿಖಾಧಿಕಾರಿಯವರ ವರದಿಯನ್ನು ಪರಿಶೀಲಿಸಿದ್ದು, ಎದುರುದಾರರುಗಳು ದೂರುದಾರರು ತಿಳಿಸಿರುವಂತೆ, 2012–13, 2013–14ನೇ ಸಾಲಿನ ನರೇಗಾ ಯೋಜನೆಯಡಿಯಲ್ಲಿ ಹಾಗೂ 13ನೇ ಹಣಕಾಸಿನ ಅನುದಾನದ ಅಡಿಯಲ್ಲಿ ಹಲವಾರು ಕಾಮಗಾರಿಗಳನ್ನು ಕೈಗೊಂಡಿದ್ದಾಗಿ ದಾಖಲೆಗಳಲ್ಲಿ ತೋರಿಸಿ, ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಕೆಲಸ ನಿರ್ವಹಿಸದೇ ಇರುವ ಕೂಲಿ ಕಾರ್ಮಿಕರ ಹೆಸರಿನಲ್ಲಿ, ಎನ್.ಎಂ.ಆರ್. ಗಳನ್ನು ಸೃಷ್ಟಿಸಿ ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಸ್ಪಷ್ಟಪಟ್ಟಿರುತ್ತದೆ.

5. ಸದರಿ ದೂರನ್ನು ತನಿಖೆಗೆ ಕೈಗೆತ್ತಿಕೊಂಡು, ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ: 25/11/2016 ರಂದು, ಮಾನ್ಯ ಉಪಲೋಕಾಯುಕ್ತರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ಸರ್ಕಾರಿ ಆದೇಶವನ್ನು ನೀಡಿರುವ ಮೇರೆಗೆ, ಮಾನ್ಯ ಉಪಲೋಕಾಯುಕ್ತರವರು ದಿನಾಂಕ: 12/12/2016 ರಂದು ಅಪರ ನಿಬಂಧಕರು, ವಿಚಾರಣೆಗಳು–10 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸಲು ಆದೇಶಿಸಿರುತ್ತಾರೆ.

6. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ ಶ್ರೀ ಎಲ್.ಹೆಚ್. ನಾವಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಲಕೇರಿ ಗ್ರಾಮ ಪಂಚಾಯತಿ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ ರವರ ವಿರುದ್ಧ ದೋಷಾರೋಪಣೆ (Articles of Charge) ಅನ್ನು ರಚಿಸಿದ್ದು, ಸದರಿ ದೋಷಾರೋಪಣೆಯು

ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ ರವರಿಗೆ ದಿನಾಂಕ: 14/02/2017 ರಂದು **ಈ ಕೆಳಕಂಡಂತೆ** ಕಳುಹಿಸಲಾಗಿರುತ್ತದೆ.

*ಅನುಬಂಧ-1*

*ದೋಷಾರೋಪಣೆ-1*

**ಶ್ರೀ ಎಲ್.ಹೆಚ್. ನಾವಿ,** ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಲಕೇರಿ ಗ್ರಾಮ ಪಂಚಾಯತಿ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ, ಆಪಾದಿತ ಸರ್ಕಾರಿ ನೌಕರರಾದ ನೀವು 2013-14ನೇ ಸಾಲಿನ ಕಲಕೇರಿ ಗ್ರಾಮ ಪಂಚಾಯತಿಯ ನರೇಗಾ ಯೋಜನೆಯಡಿ 7 ಅಂಶಗಳ ವಿಶೇಷ ಕ್ರಿಯಾ ಯೋಜನೆಯಡಿಯಲ್ಲಿ ಶ್ರೀ ಜಟ್ಟೆಪ್ಪ ರವರ ಜಮೀನಿನಲ್ಲಿ ಭೂಮಿ ಅಭಿವೃದ್ಧಿಗಾಗಿ ಖರ್ಚು ಮಾಡಿರುವ ಬಗ್ಗೆ ಅಳತೆ ಪುಸ್ತಕದಲ್ಲಿ ಯಾವುದೇ ಸಹಿ ಇರುವುದು ಕಂಡು ಬಂದಿರುವುದಿಲ್ಲ. ಕಾಮಗಾರಿ ಪೂರ್ಣಗೊಂಡ ಪ್ರಮಾಣ ಪತ್ರದಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ಅಧಿಕಾರಿಯ ಸಹಿ ಇರುವುದಿಲ್ಲ. ಕೂಲಿ ಕಾರ್ಮಿಕರಿಗೆ ಅವರ ಖಾತೆಗೆ ಹಣವನ್ನು ಜಮೆ ಮಾಡಿರುವ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ. ಶ್ರೀ ಹೀರಣ್ಣ ಝುಳಕಿ ಯವರಂತೆ ಇನ್ನೂ 6 ಜನ ಕೂಲಿ ಕಾರ್ಮಿಕರು ಕೆಲಸ ಮಾಡಿರುವುದಾಗಿ ಕಂಡು ಬಂದಿದ್ದು, ಅವರ ಖಾತೆಗೆ ಹಣ ಜಮೆಯಾಗಿರುವ ಬಗ್ಗೆ ದಾಖಲಾತಿ ಇರುವುದಿಲ್ಲ.

ಸಿಂಧಗಿ ತಾಲ್ಲೂಕಿನ ಬಿಂಜಲಬಾವಿ ಗ್ರಾಮದಲ್ಲಿ ಶ್ರೀ ರಾಮನಗೌಡ ಹೊಸಗೌಡರ ಇವರ ಹೊಲದಿಂದ ಶ್ರೀ ಆನಂದ ಗೌಡ ಇವರ ಹೊಲದವರೆಗೆ ರಸ್ತೆ ಸುಧಾರಣೆ ಕಾಮಗಾರಿಯಲ್ಲಿ ಕಾಮಗಾರಿ ಮುಕ್ತಾಯಗೊಂಡ ಪ್ರಮಾಣ ಪತ್ರದಲ್ಲಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸಿಂಧಗಿ ಇವರಿಗೆ ಸಂಬಂಧಿಸಿದ ಶಾಖಾಧಿಕಾರಿಯವರ ಸಹಿ ಮತ್ತು ನಮೂನೆ 6 ಕ್ಕೆ ಗ್ರಾಮ ಪಂಚಾಯತಿಯ ಯಾವುದೇ ಅಧಿಕಾರಿಯ ಸಹಿ ಇರುವುದಿಲ್ಲ. ಕೂಲಿಕಾರರಿಗೆ

ಅವರ ಬ್ಯಾಂಕ್ ಖಾತೆಗೆ ಹಣ ಸಂದಾಯ ಮಾಡಿರುವ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. ಕೂಲಿ ಕಾರ್ಮಿಕರ ಮಸ್ಟರ್ ರೋಲ್ ಸಂಖ್ಯೆ: 6096 ಅನ್ನು ದೂರುದಾರರು ದೂರು ಸಲ್ಲಿಸಿದ ನಂತರ ತಯಾರಿಸಿರುವುದಾಗಿ ಕಂಡು ಬರುತ್ತದೆ.

ಬಿಂಜಲಬಾವಿ ಗ್ರಾಮದ ಶ್ರೀ ಭೀಮಪ್ಪ ರಾಮಪ್ಪ ಮಾದರ ಇವರ ಹೊಲದಲ್ಲಿ ದನದ ಶೆಡ್ ರ್ಮಾಣ ಕಾಮಗಾರಿಯನ್ನು ಫಲಾನುಭವಿಯಾದ ಶ್ರೀ ಹೀರಣ್ಣ ಶಿವಬಸಪ್ಪ ಝುಳಕಿ ಅವರು ತನ್ನ ಜಾಬ್ ಕಾರ್ಡಿನಲ್ಲಿ 5 ಜನರ ಹೆಸರನ್ನು ತೋರಿಸಿದ್ದು, ಅದರಲ್ಲಿ ತಮ್ಮ ಪತ್ನಿ ಪುಷ್ಪಾವತಿ ಮತ್ತು ತಮ್ಮನಾದ ಬಸವರಾಜು ಅವರ ಹೆಸರನ್ನು ಬರೆಯಲಾಗಿದ್ದು ಇನ್ನೂಳಿದ ಮೂರು ಜನ ಸದಸ್ಯರು ಶ್ರೀಮತಿ ಬೋರಮ್ಮ, ಶ್ರೀಮತಿ ಮಲ್ಲು ಹಾಗೂ ಶ್ರೀಮತಿ ಸುವರ್ಣ ಇವರು ಆತನ ಕುಟುಂಬಕ್ಕೆ ಸೇರಿರುವುದಿಲ್ಲ. ಶ್ರೀ ಶಿವಬಸಪ್ಪ ಝುಳಕಿ ರವರು ತಾವು ನಿರ್ವಹಿಸಿದ ಕಾಮಗಾರಿಯ ಕೆಲಸದ ಬಗ್ಗೆ ತಿಳಿಸಿದ್ದು, ಸದರಿ ಕೆಲಸವು ಅವರು ಮಾಡಿದ ಕೆಲಸಕ್ಕೂ ಹಾಗೂ ದಾಖಲೆಯಲ್ಲಿ ಇರುವ ಕೆಲಸಕ್ಕೆ ವ್ಯತ್ಯಾಸವಿದೆ.

ಶ್ರೀಮತಿ ಹಸನಸ ಅಲಿಸ ಮುಜಾವರ ಇವರ ಜಮೀನಿನಲ್ಲಿ ಕೃಷಿ ಹೊಂಡ ನಿರ್ಮಾಣ ಕಾಮಗಾರಿ (2) ಸಿಂಧಗಿ ತಾಲ್ಲೂಕಿನ ಬಿಂಜಲಬಾವಿ ಗ್ರಾಮದಲ್ಲಿ ಶ್ರೀ ರಾಮನಗೌಡ ಹೊಸ ಗೌಡರ ಇವರ ಹೊಲದಿಂದ ಆನಂದ ಗೌಡ ಹೊಲದವರೆಗೆ ರಸ್ತೆ ಸುಧಾರಣಾ ಕಾಮಗಾರಿ (3) ಸಿಂಧಗಿ ತಾಲ್ಲೂಕಿನ ಬಿಂಜಲಬಾವಿ ಗ್ರಾಮದಲ್ಲಿ ಬಸನಗೌಡರ ಹೊಲದಿಂದ ಊರಿನ ಗೌಡರ ಹೊಲದವರೆಗೆ ರಸ್ತೆ ಸುಧಾರಣೆ ಕಾಮಗಾರಿಯಲ್ಲಿ ನಮೂನೆ 9, 6 ಮತ್ತು 8 ರಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರ ಸಹಿ ಮಾಡಿರುವುದಿಲ್ಲ. ಕಾಮಗಾರಿ ಆದೇಶದ ಪತ್ರ ಹಾಗೂ ಕಾಮಗಾರಿ ಮುಕ್ತಾಯಗೊಂಡ ಪ್ರಮಾಣ ಪತ್ರಗಳಿಗೆ

ಸಹ ಕಾರ್ಯನಿರ್ವಾಹಣಾ ಏಜೆನ್ಸಿಯ ಅಥವಾ ಜಲಾನಯನ ಇಲಾಖೆಯ ಯಾವುದೇ ಅಧಿಕಾರಿಯ ಸಹಿ ಇರುವುದಿಲ್ಲ. ಹಾಗೆಯೇ ಕಡತದಲ್ಲಿ ಎಂಐಎಸ್ ಶೀಟ್ ಕಾಮಗಾರಿಯ ಮೂರು ಹಂತದ ಛಾಯಾಚಿತ್ರಗಳು, ಎಫ್ ಅಂಡ್ ಎಫ್ ಬಿಲ್ಲುಗಳು ಇದ್ದು, ಇವುಗಳ ಪ್ರತಿಗಳು ಲಭ್ಯವಿರುವುದಿಲ್ಲ ಹಾಗೆಯೇ ಕೂಲಿಕಾರರಿಗೆ ಅವರ ಬ್ಯಾಂಕ್ ಖಾತೆಗೆ ಹಣ ಸಂದಾಯ ಮಾಡಿರುವ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ. ಮೇಲೆ ಹೇಳಿದ ರಸ್ತೆ ಸುಧಾರಣೆ ಕಾಮಗಾರಿಯನ್ನು ದೂರುದಾರರು ಅರ್ಜಿ ಸಲ್ಲಿಸಿದ ನಂತರ ಕಾಮಗಾರಿ ಕೈಗೊಂಡಿರುವುದಾಗಿ ಕಂಡು ಬರುತ್ತದೆ. ಅಳತೆ ಪುಸ್ತಕದಲ್ಲಿ ಯಾವುದೇ ಅಧಿಕಾರಿಯ ಸಹಿ ಇರುವುದಿಲ್ಲ. ಜಾಬ್ ಕಾರ್ಡಿನಲ್ಲಿ ಇರುವ ಹೆಸರುಗಳಾದ ಶ್ರೀಮತಿ ರೇಣುಕಾ ಮತ್ತು ಶ್ರೀಮತಿ ಅನ್ನಪೂರ್ಣ ಇವರು ಶ್ರೀ ಸಿದ್ದಣ್ಣ ಸುಬ್ಬಣ್ಣ ಅಸ್ಕಿ ಇವರ ಕುಟುಂಬದ ಸದಸ್ಯರಲ್ಲ. ಶ್ರೀ ಸಿದ್ದಣ್ಣ ಅಸ್ಕಿಯವರು 15 ವರ್ಷಗಳಿಂದ ಕೇಸರಟ್ಟಿ ಗ್ರಾಮದಲ್ಲಿ ಸಾರ್ವಜನಿಕರಿಗೆ ಪ್ರಥಮ ಚಿಕಿತ್ಸೆ ನೀಡುವ ಕೆಲಸ ನಿರ್ವಹಿಸುತ್ತಿರುವುದಾಗಿಯೂ, ತಮ್ಮ ಪತ್ನಿ ಶೀಲಾ ಇವರು ಎಂ.ಎ ಬಿ.ಎಡ್ ಮಾಡಿ, ಮನೆ ಕೆಲಸ ಮಾಡುತ್ತಿದ್ದಾರೆ, ತಂಗಿ ನಾಗಮ್ಮ ಮುದ್ದೇಬಿಹಾಳದಲ್ಲಿ ವಾಸವಾಗಿದ್ದಾರೆ ಮತ್ತು ಶ್ರೀ ಉಮೇಶ್ ಇವರು ತಮ್ಮ ಪತ್ನಿಯೊಂದಿಗೆ 7-8 ವರ್ಷದಿಂದ ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಕೆಲಸ ಮಾಡಿಕೊಂಡಿರುತ್ತಾರೆ ಆದರೆ, ಇವರುಗಳು ಕೂಲಿ ಕಾರ್ಮಿಕರಾಗಿ ಯಾವುದೇ ಕೆಲಸಗಳನ್ನು ಮಾಡಿರುವುದಿಲ್ಲ.

ಶಿವಪ್ಪ ಬ್ಯಾಲಾಳ ಜಾಬ್ ಕಾರ್ಡ್‌ನಲ್ಲಿ ತೋರಿಸಿರುವ ಶ್ರೀ ಮುತ್ತಪ್ಪ 8 ನೇ ತರಗತಿಯಲ್ಲಿ ಓದುತ್ತಿದ್ದಾರೆ, ಶ್ರೀಮತಿ ರೇಣುಕಾ ಇವರನ್ನು 4 ವರ್ಷದ ಹಿಂದೆ ಮುದ್ದೇಬಿಹಾಳದ ನಾಗರಾಳಕ್ಕೆ ಮದುವೆ ಮಾಡಿಕೊಡಲಾಗಿದೆ.

ಆಪಾದಿತ ಸರ್ಕಾರಿ ನೌಕರರಾದ ನೀವು ದೂರುದಾರರು ತಿಳಿಸಿರುವಂತೆ, 2012-13, 2013-14ನೇ ಸಾಲಿನ ನರೇಗಾ ಯೋಜನೆಯಡಿಯಲ್ಲಿ ಹಾಗೂ 13ನೇ ಹಣಕಾಸಿನ ಅನುದಾನದ ಅಡಿಯಲ್ಲಿ ಹಲವಾರು ಕಾಮಗಾರಿಗಳನ್ನು ಕೈಗೊಂಡಿದ್ದಾಗಿ

ದಾಖಲೆಗಳಲ್ಲಿ ತೋರಿಸಿ, ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಕೆಲಸ ನಿರ್ವಹಿಸದೇ ಇರುವ ಕೂಲಿ ಕಾರ್ಮಿಕರ ಹೆಸರಿನಲ್ಲಿ, ಎನ್.ಎಂ.ಆರ್ ಗಳನ್ನು ಸೃಷ್ಟಿಸಿ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತೀರಿ.

ಆದಕಾರಣ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ (3)(1)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

<u>*ಅನುಬಂಧ-2*</u>

<u>ದೋಷಾರೋಪಣೆಯ ವಿವರ</u>

(ಸ್ಟೇಟ್‌ಮೆಂಟ್ ಆಫ್ ಇಂಪ್ಯುಟೇಷನ್ ಆಫ್ ಮಿಸ್‌ಕಾಂಡೆಕ್ಟ್)

1. ದೂರುದಾರರಾದ ಶ್ರೀ ಅಮರೇಶ್ ಇವರು ಈ ಸಂಸ್ಥೆಗೆ ದೂರೊಂದನ್ನು ನೀಡಿ, ಕರ್ನಾಟಕ ಸರ್ಕಾರದ ವತಿಯಿಂದ ಸಿಂಧಗಿ ತಾಲ್ಲೂಕಿನ ಕಲಕೇರಿ ಗ್ರಾಮ ಪಂಚಾಯತಿಯಲ್ಲಿ 2012-13, 2013-14ನೇ ಸಾಲಿಗೆ ನರೇಗಾ ಯೋಜನೆಯಡಿಯಲ್ಲಿ ಹಾಗೂ 13ನೇ ಹಣಕಾಸಿನ ಅನುದಾನದಡಿಯಲ್ಲಿ ಹಣವನ್ನು ಬಿಡುಗಡೆ ಮಾಡಲಾಗಿದ್ದು, ಸದರಿ ಹಣವನ್ನು ಆಪಾದಿತ ಸರ್ಕಾರಿ ನೌಕರರು ದುರುಪಯೋಗಪಡಿಸಿಕೊಂಡಿರುತ್ತಾರೆಂದು ಹಾಗೂ ಹಲವಾರು ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿರುತ್ತಾರೆ, ಆದ್ದರಿಂದ, ಆಪಾದಿತ ಸರ್ಕಾರಿ ನೌಕರರ ಮೇಲೆ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಆಪಾದಿತ ಸರ್ಕಾರಿ ನೌಕರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಆಪಾದಿತ ಸರ್ಕಾರಿ ನೌಕರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ದೂರುದಾರರು ಮಾಡಿರುವ ಆರೋಪಗಳು

ಸುಳ್ಳಿನಿಂದ ಕೂಡಿರುತ್ತದೆಂದು, ನರೇಗಾ ಯೋಜನೆಯಡಿಯಲ್ಲಿ ಹಾಗೂ 13ನೇ ಹಣಕಾಸಿನ ಅನುದಾನದಡಿಯಲ್ಲಿ ಕಾಮಗಾರಿಗಳನ್ನು ಸರ್ಕಾರದ ಮಾರ್ಗಸೂಚಿಯಂತೆ ಕೈಗೊಳ್ಳಲಾಗಿದೆ ಹಾಗೂ ಯಾವುದೇ ಅವ್ಯವಹಾರ ನಡೆದಿರುವುದಿಲ್ಲವೆಂದು ತಿಳಿಸಿರುತ್ತಾರೆ.

3. ಆಪಾದಿತ ಸರ್ಕಾರಿ ನೌಕರರ ಆಕ್ಷೇಪಣೆ ಮೇರೆಗೆ ದೂರುದಾರರ ಪ್ರತ್ಯುತ್ತರ ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ, ಆಪಾದಿತ ಸರ್ಕಾರಿ ನೌಕರರು ಕುಡಿಯುವ ನೀರಿನ ಸ್ಥಾವರವನ್ನು ಸುಸ್ಥಿರವಾಗಿ ಇಡಲಾಗಿದೆ ಎಂದು ಹಾಗೂ ಕುಡಿಯುವ ನೀರಿನ ತೊಂದರೆ ಆಗದಂತೆ ನೋಡಿಕೊಳ್ಳಲಾಗಿದೆ ಎಂದು ತಿಳಿಸಿರುತ್ತಾರೆ. ಆದರೆ, ತಮ್ಮ ಗ್ರಾಮದಲ್ಲಿ ಕುಡಿಯುವ ನೀರಿನ ಸ್ಥಾವರವನ್ನು ನಿರ್ಮಾಣ ಮಾಡಿರುವುದಿಲ್ಲ. ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯನ್ನು ವರ್ಷಕ್ಕೆ ಎರಡು ಬಾರ ಕರೆಯಲಾಗಿತ್ತೆಂದು ತಿಳಿಸಿದ್ದು, ಈ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳು ಇರುವುದಿಲ್ಲ. ಆದರೆ, ಗ್ರಾಮ ಸಭೆ ನಡೆಸಿ ಮನಸ್ಸಿಗೆ ಬಂದಂತೆ ಕ್ರಿಯಾ ಯೋಜನೆಗಳನ್ನು ಮಾಡಿರುತ್ತಾರೆ. ನಿರುಪಯುಕ್ತ ಆದ ಬಾವಿಗಳನ್ನು ಹಾಗೂ ಕೊಳವೆ ಬಾವಿಗಳನ್ನು ಮುಚ್ಚಬೇಕೆಂದು ಸರ್ಕಾರದ ಆದೇಶವಿದ್ದರೂ ಅಧ್ಯಕ್ಷರು ಈ ಬಾವಿಗಳನ್ನು ಮುಚ್ಚಲು ಬಿಡುತ್ತಿಲ್ಲ. ಸ್ಮಶಾನದ ಅಭಿವೃದ್ಧಿಯಾಗಲೀ, ಕೃಷಿ ಹೊಂಡವನ್ನು ನಿರ್ಮಿಸುವುದಾಗಲೀ ಯಾವುದೇ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ, ಆದ್ದರಿಂದ, ಆಪಾದಿತ ಸರ್ಕಾರಿ ನೌಕರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

4. ಈ ಹಂತದಲ್ಲಿ ಪ್ರಕರಣದ ತನಿಖೆಯನ್ನು ಈ ಸಂಸ್ಥೆಯ ವಿಜಾಪುರದ ಆರಕ್ಷಕ ನಿರೀಕ್ಷಕರಿಗೆ ವಹಿಸಲಾಗಿದ್ದು, ಸದರಿಯವರು ತನಿಖೆ ಕೈಗೊಂಡು ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಹಾಜರುಪಡಿಸಲಾಗಿದೆ. ತನಿಖಾಧಿಕಾರಿಯವರು ಶ್ರೀ ಹೀರಣ್ಣ ಝಳಕಿ ಇವರು ನರೇಗಾ ಯೋಜನೆಯ ಫಲಾನುಭವಿಯಾಗಿದ್ದು, ಇವರ ದಾಖಲೆಗಳನ್ನು ತನಿಖಾಧಿಕಾರಿಯವರು ಸಂಗ್ರಹಿಸಿ ಪರಿಶೀಲಿಸಿದ್ದು, ಸದರಿಯವರು ಶ್ರೀ ಜಟ್ಟಪ್ಪ ಸಾಹೇಬ ಗೌಡ ಬ್ಯಾಲಾಳ ಇವರ ಹೊಲದಲ್ಲಿ ಕೃಷಿ ಹೊಂಡ ನಿರ್ಮಾಣದ ಕಾಮಗಾರಿಯಲ್ಲಿ ಕೂಲಿ ಕಾರ್ಮಿಕರಾಗಿ ಕೆಲಸ ನಿರ್ವಹಿಸಿದ್ದಾಗಿ ತೋರಿಸಲಾಗಿದೆ. ಸದರಿ ಕಾಮಗಾರಿಯು 2013-14ನೇ ಸಾಲಿನ ಕಲಕೇರಿ ಗ್ರಾಮ ಪಂಚಾಯತಿಯ ನರೇಗಾ ಯೋಜನೆಯಡಿ 7 ಅಂಶಗಳ ವಿಶೇಷ ಕ್ರಿಯಾ ಯೋಜನೆಯಡಿಯಲ್ಲಿ ಶ್ರೀ ಜಟ್ಟಪ್ಪ ರವರ ಜಮೀನಿನಲ್ಲಿ ಭೂಮಿ ಅಭಿವೃದ್ಧಿಗಾಗಿ ಖರ್ಚು ಮಾಡಿರುವುದಾಗಿ ತೋರಿಸಲಾಗಿದೆ. ಕಾಮಗಾರಿಯ ಅಂದಾಜು ಮೊತ್ತವನ್ನು ರೂ.0.40 ಲಕ್ಷವೆಂದು

ತೋರಿಸಿದ್ದು, ಸದರಿ ಕಾಮಗಾರಿ ಕಡತದಲ್ಲಿ ಅನುಸರಿಸಬೇಕಾಗಿರುವ ಕ್ರಮಗಳ ಚೆಕ್ ಲಿಸ್ಟ್, ಕಾಮಗಾರಿ ಆದೇಶದ ಪ್ರತಿ, ತಾಂತ್ರಿಕ ಅಂದಾಜು ಪತ್ರಿಕೆ, ಕಾಮಗಾರಿ ಮುಕ್ತಾಯಗೊಂಡ ಪ್ರಮಾಣ ಪತ್ರ, ನಮೂನೆ 9 ಹಾಗೂ ಕೆಲಸಕ್ಕೆ ವರದಿ ಮಾಡಿಕೊಳ್ಳುವ ನೋಟೀಸ್ ನಮೂನೆ 8 ಇವುಗಳು ಇರುತ್ತವೆ. ಆದರೆ, ನಮೂನೆ 6 ಅನ್ನು ಹಾಗೂ ಅಳತೆ ಪುಸ್ತಕದ ಪ್ರತಿಯನ್ನು ಪರಿಶೀಲಿಸಿದಲ್ಲಿ, ಯಾವುದೇ ಸಹಿ ಇರುವುದು ಕಂಡು ಬರುವುದಿಲ್ಲ. ಅಳತೆ ಪುಸ್ತಕದ ಪುಟ 5 ರ ಜೆರಾಕ್ಸ ಪ್ರತಿಯನ್ನು ಹಾಜರುಪಡಿಸಲಾಗಿದೆ. ನಮೂನೆ 8 ಅನ್ನು ಹಾಜರುಪಡಿಸಲಾಗಿದೆ. ಕಾಮಗಾರಿ ಪೂರ್ಣಗೊಂಡ ಪ್ರಮಾಣ ಪತ್ರದಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ಅಧಿಕಾರಿಯ ಸಹಿ ಇರುವುದಿಲ್ಲ. ಸದರಿ ಕಾಮಗಾರಿ ಪೂರ್ಣಗೊಂಡ ಪ್ರಮಾಣಪತ್ರವನ್ನು ಹಾಜರುಪಡಿಸಲಾಗಿದೆ. ಕೂಲಿ ಕಾರ್ಮಿಕರಿಗೆ ಅವರ ಖಾತೆಗೆ ಹಣವನ್ನು ಜಮೆ ಮಾಡಿರುವ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ. ಶ್ರೀ ಹೀರಣ್ಣ ಝಳಕಿ ಯವರಂತೆ ಇನ್ನೂ 6 ಜನ ಕೂಲಿ ಕಾರ್ಮಿಕರು ಕೆಲಸ ಮಾಡಿರುವುದಾಗಿ ಕಂಡು ಬಂದಿದ್ದು, ಅವರ ಖಾತೆಗೆ ಹಣ ಜಮೆಯಾಗಿರುವ ಬಗ್ಗೆ ದಾಖಲಾತಿ ಇರುವುದಿಲ್ಲ.

5. ಸಿಂಧಗಿ ತಾಲ್ಲೂಕಿನ ಬಿಂಜಲಬಾವಿ ಗ್ರಾಮದಲ್ಲಿ ಶ್ರೀ ರಾಮನಗೌಡ ಹೊಸಗೌಡರ ಇವರ ಹೊಲದಿಂದ ಶ್ರೀ ಆನಂದ ಗೌಡ ಇವರ ಹೊಲದವರೆಗೆ ರಸ್ತೆ ಸುಧಾರಣೆ ಕಾಮಗಾರಿಯನ್ನು 2013–14 ನೇ ಸಾಲಿನಲ್ಲಿ ಕಲಕೇರಿ ಗ್ರಾಮ ಪಂಚಾಯತಿ ವತಿಯಿಂದ ನರೇಗಾ ಯೋಜನೆಯಡಿಯಲ್ಲಿ ಸರ್ವಾರುತು ರಸ್ತೆ ನಿರ್ಮಾಣ ಕಾಮಗಾರಿಯನ್ನು ಕೈಗೊಂಡಿರುವುದಾಗಿ ತೋರಿಸಲಾಗಿದ್ದು, ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಎಂಐಎಸ್ ಶೀಟ್, ಕಾಮಗಾರಿ ಆದೇಶ ಪತ್ರ, ಕಾಮಗಾರಿಯ ಮೂರು ಹಂತದ ಭಾವಚಿತ್ರಗಳು, ಎಫ್ ಅಂಡ್ ಎಫ್ ಬಿಲ್ಲು, ಅಳತೆ ಪುಸ್ತಕ ಭಾಗ–3 ಇವುಗಳು ಇರುತ್ತವೆ. ಕಾಮಗಾರಿ ಮುಕ್ತಾಯಗೊಂಡ ಪ್ರಮಾಣ ಪತ್ರವನ್ನು ಪರಿಶೀಲಿಸಿದಲ್ಲಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸಿಂಧಗಿ ಇವರಿಗೆ ಸಂಬಂಧಿಸಿದ ಶಾಖಾಧಿಕಾರಿಯವರ ಸಹಿಯಾಗಲೀ ಅಥವಾ ನಮೂನೆ 6 ಕ್ಕೆ ಗ್ರಾಮ ಪಂಚಾಯತಿಯ ಯಾವುದೇ ಅಧಿಕಾರಿಯ ಸಹಿ ಇರುವುದಿಲ್ಲ. ಕಾಮಗಾರಿ ಪೂರ್ಣಗೊಂಡ ಪ್ರಮಾಣ ಪತ್ರವನ್ನು ಹಾಜರುಪಡಿಸಲಾಗಿದೆ. ನಮೂನೆ 6 ಅನ್ನು ಹಾಜರುಪಡಿಸಲಾಗಿದೆ. ಕೂಲಿಕಾರರಿಗೆ ಅವರ ಬ್ಯಾಂಕ್ ಖಾತೆಗೆ ಹಣ ಸಂದಾಯ ಮಾಡಿರುವ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. ಕೂಲಿ ಕಾರ್ಮಿಕರ ಮಸ್ಟರ್ ರೋಲ್ ಸಂಖ್ಯೆ:

6096 ಅನ್ನು ದೂರುದಾರರು ದೂರು ಸಲ್ಲಿಸಿದ ನಂತರ ತಯಾರಿಸಿರುವುದಾಗಿ ಕಂಡು ಬರುತ್ತದೆ ಎಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ಸದರಿ ಮಸ್ಟರ್ ರೋಲ್ ಅನ್ನು ಹಾಜರುಪಡಿಸಲಾಗಿದೆ.

6. ಬಿಂಜಲಬಾವಿ ಗ್ರಾಮದ ಶ್ರೀ ಭೀಮಪ್ಪ ರಾಮಪ್ಪ ಮಾದರ ಇವರ ಹೊಲದಲ್ಲಿ ದನದ ಶೆಡ್ ನಿರ್ಮಾಣ ಕಾಮಗಾರಿಯನ್ನು 2013-14ನೇ ಸಾಲಿಗೆ ಸಂಬಂಧಿಸಿದ ಕಾಮಗಾರಿಯಾಗಿದ್ದರೂ ಸಹ, ಸದರಿ ಕಾಮಗಾರಿಯನ್ನು 2015 ಏಪ್ರಿಲ್ ತಿಂಗಳಲ್ಲಿ ಕೈಗೊಂಡ ಬಗ್ಗೆ ದಾಖಲೆಗಳಿಂದ ತಿಳಿದು ಬಂದಿರುತ್ತದೆ. ಈ ಕಾಮಗಾರಿಯಲ್ಲಿ ಮೇಲೆ ಹೇಳಿದ ಶ್ರೀ ಹೀರಣ್ಣ ಝುಳಕಿ ಮತ್ತು ಅವರ ಪತ್ನಿ ಶ್ರೀಮತಿ ಪಾರ್ವತಿಯವರು ಕೂಲಿ ಕಾರ್ಮಿಕರಾಗಿ ಕೆಲಸ ನಿರ್ವಹಿಸಿರುವುದು ಕಂಡು ಬಂದಿರುತ್ತದೆ.

7. ಬಿಂಜಲಬಾವಿ ಗ್ರಾಮದ ಕಲಕೇರಿ ಸರ್ವೇ ನಂ.141/2ಎಯ ಗಲ್ಲಾಳಪ್ಪ ನಿಂ ಮಾದರ ಇವರ ಹೊಲದಲ್ಲಿ ಬದು ನಿರ್ಮಾಣ ಕಾಮಗಾರಿಯನ್ನು 2015-16 ನೇ ಸಾಲಿನಲ್ಲಿ ಕೈಗೊಳ್ಳಾಲಾಗಿದೆ ಎಂದು, ಇದು ಇನ್ನೂ ಪೂರ್ಣಗೊಳ್ಳಲಾಗಿರುವುದಿಲ್ಲವೆಂದು ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ತಿಳಿಸಿರುತ್ತಾರೆಂದು, ಸದರಿ ಕಾಮಗಾರಿಯು 2012-13, 2013-14 ಮತ್ತು 2014-15ರ ಕ್ರಿಯಾ ಯೋಜನೆಯಲ್ಲಿ ಸೇರಿಲ್ಲವೆಂದು ಕಂಡು ಬಂದಿದೆ ಎಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ಫಲಾನುಭವಿಯಾದ ಶ್ರೀ ಹೀರಣ್ಣ ಶಿವಬಸಪ್ಪ ಝುಳಕಿ ರವರನ್ನು ತನಿಖಾಧಿಕಾರಿಯವರು ವಿಚಾರಣೆ ಮಾಡಲಾಗಿ, ತನ್ನ ಜಾಬ್ ಕಾರ್ಡಿನಲ್ಲಿ 5 ಜನರ ಹೆಸರನ್ನು ತೋರಿಸಲಾಗಿದ್ದು, ಅದರಲ್ಲಿ ತಮ್ಮ ಪತ್ನಿಯ ಹೆಸರು ಪುಷ್ಪಾವತಿ ಎಂದು ಹಾಗೂ ತನ್ನ ತಮ್ಮನ ಹೆಸರನ್ನು ಬಸವರಾಜು ಎಂದಿರುತ್ತದೆ ಎಂದು ತಿಳಿಸಿರುತ್ತಾರೆ. ಶ್ರೀ ಹೀರಣ್ಣ ಶಿವಬಸಪ್ಪ ಝುಳಕಿ ಯವರ ಜಾಬ್ ಕಾರ್ಡ್ ಅನ್ನು ಹಾಜರುಪಡಿಸಲಾಗಿದೆ. ಆದರೆ, ಇನ್ನೂಳಿದ ಮೂರು ಜನ ಸದಸ್ಯರು ಶ್ರೀಮತಿ ಬೋರಮ್ಮ, ಶ್ರೀಮತಿ ಮಲ್ಲು ಹಾಗೂ ಶ್ರೀಮತಿ ಸುವರ್ಣ ಅವರು ತಮ್ಮ ಕುಟುಂಬದ ಸದಸ್ಯರು ಅಲ್ಲವೆಂದು ಹಾಗೂ ಈ ಬಗ್ಗೆ ಹೇಳಿಕೆಯನ್ನು ಸಹ ನೀಡಿರುತ್ತಾರೆಂದು ತನಿಖಾಧಿಕಾರಿಗಳು ತಿಳಿಸಿರುತ್ತಾರೆ. ಸದರಿ ಶ್ರೀ ಶಿವಬಸಪ್ಪ ಝುಳಕಿ ರವರು ತಾವು ನಿರ್ವಹಿಸಿದ ಕಾಮಗಾರಿಯ ಕೆಲಸದ ಬಗ್ಗೆ ತಿಳಿಸಿದ್ದು, ಸದರಿ ಕೆಲಸವು ಅವರು ಮಾಡಿದ ಕೆಲಸಕ್ಕೂ ಹಾಗೂ ದಾಖಲೆಯಲ್ಲಿ ಇರುವ ಕೆಲಸಕ್ಕೆ ವ್ಯತ್ಯಾಸ ವಿರುತ್ತದೆ. ಅದೇ ರೀತಿ, ಶ್ರೀ ಸಿದ್ದಣ್ಣ ಅಸ್ಕಿ ಇವರ ಜಾಬ್ ಕಾರ್ಡ್ ನಂ.1352 ಇದ್ದು, ಇವರ ಜಾಬ್ ಕಾರ್ಡ್ ಅನ್ನು ಹಾಜರುಪಡಿಸಲಾಗಿದೆ. ಅದರಲ್ಲಿ ಶ್ರೀಮತಿ

ಗಾಯತ್ರಿ, ಶ್ರೀಮತಿ ಕಸ್ತೂರಿ ಬಾಯಿ, ಶ್ರೀಮತಿ ನಾಗಮ್ಮ, ಶ್ರೀ ರಮೇಶ್, ಶ್ರೀಮತಿ ರೇಣುಕಾ, ಶ್ರೀಮತಿ ಅನ್ನಪೂರ್ಣ, ಶ್ರೀ ಉಮೇಶ್ ಇವರುಗಳನ್ನು ಸದಸ್ಯರುಗಳೆಂದು ತೋರಿಸಲಾಗಿದ್ದು, ಸದರಿಯವರುಗಳು ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಿರುವುದಾಗಿ ತೋರಿಸಲಾಗಿರುತ್ತದೆ.

i. ಶ್ರೀಮತಿ ಹಸನಸ ಅಲಿಸ ಮುಜಾವರ ಇವರ ಜಮೀನಿನಲ್ಲಿ ಕೃಷಿ ಹೊಂಡ ನಿರ್ಮಾಣ ಕಾಮಗಾರಿ (2) ಸಿಂಧಗಿ ತಾಲ್ಲೂಕಿನ ಬಿಂಜಲಬಾವಿ ಗ್ರಾಮದಲ್ಲಿ ಶ್ರೀ ರಾಮನಗೌಡ ಹೊಸ ಗೌಡರ ಇವರ ಹೊಲದಿಂದ ಆನಂದ ಗೌಡ ಹೊಲದವರೆಗೆ ರಸ್ತೆ ಸುಧಾರಣಾ ಕಾಮಗಾರಿ (3) ಸಿಂಧಗಿ ತಾಲ್ಲೂಕಿನ ಬಿಂಜಲಬಾವಿ ಗ್ರಾಮದಲ್ಲಿ ಬಸನಗೌಡರ ಹೊಲದಿಂದ ಊರಿನ ಗೌಡರ ಹೊಲದವರೆಗೆ ರಸ್ತೆ ಸುಧಾರಣೆ ಕಾಮಗಾರಿ ಇವುಗಳನ್ನು ಕೈಗೊಳ್ಳಲಾಗಿದ್ದು, ಸದರಿ ಕಾಮಗಾರಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ, ನಮೂನೆ 9 ಹಾಗೂ ಕೆಲಸಕ್ಕೆ ವರದಿ ಮಾಡಿಕೊಳ್ಳುವ ನೋಟೀಸ್ ನಮೂನೆ 6 ಮತ್ತು 8 ಇದ್ದು, ಅವುಗಳಿಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಸಹಿ ಮಾಡಿರುವುದಿಲ್ಲ. ಕಾಮಗಾರಿ ಆದೇಶದ ಪತ್ರ ಹಾಗೂ ಕಾಮಗಾರಿ ಮುಕ್ತಾಯಗೊಂಡ ಪ್ರಮಾಣ ಪತ್ರಗಳಿಗೆ ಸಹ ಕಾರ್ಯನಿರ್ವಾಹಣಾ ಏಜೆನ್ಸಿಯ ಅಥವಾ ಜಲಾನಯನ ಇಲಾಖೆಯ ಯಾವುದೇ ಅಧಿಕಾರಿಯ ಸಹಿ ಇರುವುದಿಲ್ಲ. ಹಾಗೆಯೇ ಕಡತದಲ್ಲಿ ಎಂಐಎಸ್ ಶೀಟ್ ಕಾಮಗಾರಿಯ ಮೂರು ಹಂತದ ಛಾಯಾಚಿತ್ರಗಳು, ಎಫ್ ಅಂಡ್ ಎಫ್ ಬಿಲ್ಲುಗಳು ಇದ್ದು, ಇವುಗಳ ಪ್ರತಿಗಳು ಲಭ್ಯವಿರುವುದಿಲ್ಲ ಹಾಗೆಯೇ ಕೂಲಿಕಾರರಿಗೆ ಅವರ ಬ್ಯಾಂಕ್ ಖಾತೆಗೆ ಹಣ ಸಂದಾಯ ಮಾಡಿರುವ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ. ಮೇಲೆ ಹೇಳಿದ ರಸ್ತೆ ಸುಧಾರಣೆ ಕಾಮಗಾರಿಯನ್ನು ದೂರುದಾರರು ಅರ್ಜಿ ಸಲ್ಲಿಸಿದ ನಂತರ ಕಾಮಗಾರಿ ಕೈಗೊಂಡಿರುವುದಾಗಿ ಕಂಡು ಬರುತ್ತದೆ ಎಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ಅಳತೆ ಪುಸ್ತಕದ ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ಅಳತೆ ಪುಸ್ತಕಕ್ಕೆ ಯಾವುದೇ ಅಧಿಕಾರಿಯು ಸಹಿ ಮಾಡಿರುವುದಿಲ್ಲ. ಮೇಲೆ ಹೇಳಿದ ಶ್ರೀ ಮುಜಾವರ್ ರವರ ಜಮೀನಿನ ಕೃಷಿ ಹೊಂಡದ ಕಾಮಗಾರಿಗೆ ಸಂಬಂಧಿಸಿದ ಅಳತೆ ಪುಸ್ತಕವನ್ನು ಹಾಜರುಪಡಿಸಲಾಗಿದೆ. ಫಲಾನುಭವಿಯಾದ ಶ್ರೀ ಸಿದ್ದಣ್ಣ ಸುಬ್ಬಣ್ಣ ಅಸ್ಕಿ ಇವರನ್ನು ವಿಚಾರಣೆ ಮಾಡಲಾಗಿದ್ದು, ತಮ್ಮ ಜಾಬ್ ಕಾರ್ಡಿನಲ್ಲಿ ಇರುವ ಹೆಸರುಗಳಾದ ಶ್ರೀಮತಿ ರೇಣುಕಾ ಮತ್ತು ಶ್ರೀಮತಿ ಅನ್ನಪೂರ್ಣ ತಮಗೆ ಗೊತ್ತಿಲ್ಲವೆಂದು ಹಾಗೂ ತಮ್ಮ ಕುಟುಂಬದ ಸದಸ್ಯರಲ್ಲವೆಂದು ಹೇಳಿಕೆ ನೀಡಿರುತ್ತಾರೆ. ಇದಲ್ಲದೇ, ಶ್ರೀ ಸಿದ್ದಣ್ಣ ಅಸ್ಕಿಯವರು

15 ವರ್ಷಗಳಿಂದ ಕೇಸರಟ್ಟಿ ಗ್ರಾಮದಲ್ಲಿ ಸಾರ್ವಜನಿಕರಿಗೆ ಪ್ರಥಮ ಚಿಕಿತ್ಸೆ ನೀಡುವ ಕೆಲಸ ನಿರ್ವಹಿಸುತ್ತಿರುವುದಾಗಿಯೂ, ತಮ್ಮ ಪತ್ನಿ ಶೀಲಾ ಇವರು ಎಂ.ಎ ಬಿ.ಎಡ್ ಓದಿ, ಮನೆ ಕೆಲಸ ಮಾಡುತ್ತಿರುವುದಾಗಿಯೂ, ತಮ್ಮ ತಂಗಿ ನಾಗಮ್ಮ ಮುದ್ದೇಬಿಹಾಳದಲ್ಲಿ ವಾಸವಿರುವುದಾಗಿಯೂ ಮತ್ತು ಶ್ರೀ ಉಮೇಶ್ ಇವರು ತಮ್ಮ ಪತ್ನಿಯೊಂದಿಗೆ 7–8 ವರ್ಷದಿಂದ ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಕೆಲಸ ಮಾಡಿಕೊಂಡಿರುತ್ತಾರೆಂದು ತಿಳಿಸಿರುತ್ತಾರೆ. ಆದರೆ, ಇವರುಗಳು ಕೂಲಿ ಕಾರ್ಮಿಕರಾಗಿ ಮೇಲೆ ಹೇಳಿದ ಕಾಮಗಾರಿಗಳಲ್ಲಿ ಕೆಲಸ ಮಾಡಿರುವುದಾಗಿ ದಾಖಲೆಗಳಲ್ಲಿ ತೋರಿಸಲಾಗಿರುತ್ತದೆ.

ii. ಶ್ರೀಮತಿ ನೀಲಮ್ಮ ಬ್ಯಾಲಾಳ ಇವರು ಮತ್ತು ಇವರ ಕುಟುಂಬದವರು ಶ್ರೀ ಹಸನಸ ಅಲಿಸಾ ಮುಜಾವರ್ ಇವರ ಜಮೀನಿನಲ್ಲಿ ಕೃಷಿ ಹೊಂಡ ನಿರ್ಮಾಣ ಕಾಮಗಾರಿಯನ್ನು ಕೈಗೊಂಡ ಕೂಲಿ ಕಾರ್ಮಿಕರಾಗಿ ಕೆಲಸ ನಿರ್ವಹಿಸಿರುವುದಾಗಿ ದಾಖಲೆ ತೋರಿಸಿದ್ದು, ಸದರಿ ನೀಲಮ್ಮ ಬ್ಯಾಲಾಳ ಇವರ ಪತಿ ಶಿವಪ್ಪ ಬ್ಯಾಲಾಳ ಇವರನ್ನು ತನಿಖಾಧಿಕಾರಿಗಳು ವಿಚಾರಣೆ ಮಾಡಿ ಹೇಳಿಕೆ ಪಡೆದಿದ್ದು, ತಮ್ಮ ಜಾಬ್ ಕಾರ್ಡ್‌ನಲ್ಲಿ ತೋರಿಸಿರುವ ಶ್ರೀ ಮುತ್ತಪ್ಪ ಈತನು ತನ್ನ ಮಗನಾಗಿದ್ದು, ಈತನು 8 ನೇ ತರಗತಿಯಲ್ಲಿ ಓದುತ್ತಿರುವುದಾಗಿ ತಿಳಿಸಿರುತ್ತಾರೆ ಹಾಗೂ ತಮ್ಮ ಜಾಬ್ ಕಾರ್ಡ್‌ನಲ್ಲಿ ತೋರಿಸಿರುವ ಶ್ರೀಮತಿ ರೇಣುಕಾ ಇವರನ್ನು 4 ವರ್ಷದ ಹಿಂದೆ ಮುದ್ದೇಬಿಹಾಳದ ನಾಗರಾಳಕ್ಕೆ ಮದುವೆ ಮಾಡಿಕೊಡಲಾಗಿದೆ ಎಂದು ತಿಳಿಸಿರುತ್ತಾರೆಂದು ಹಾಗೂ ಸದರಿಯವರು ತಾವು ಕೂಲಿ ಕಾರ್ಮಿಕರಾಗಿ ಕೆಲಸ ಮಾಡಿದ್ದಾಗಿ ತಿಳಿಸಿದ್ದು, ಅವರು ಮಾಡಿರುವೆನೆಂದು ತಿಳಿಸಿರುವ ಕೆಲಸಕ್ಕೂ ದಾಖಲಾತಿಯಲ್ಲೂ ತೋರಿಸುವ ಕೆಲಸಕ್ಕೂ ವ್ಯತ್ಯಾಸವಿರುತ್ತದೆ. ಶ್ರೀಮತಿ ನೀಲಮ್ಮ ಬ್ಯಾಲಾಳ ಇವರ ಜಾಬ್ ಕಾರ್ಡ್ ಅನ್ನು ಹಾಜರುಪಡಿಸಲಾಗಿದೆ.

iii. ಹಾಗೆಯೇ ಶ್ರೀಮತಿ ಪಾರ್ವತಿ ಚೌಕಾಪೂರ ಇವರು ಮತ್ತು ಇವರ ಜಾಬ್ ಕಾರ್ಡಿನಲ್ಲಿ ಇರುವ ಸದಸ್ಯರುಗಳು ಶ್ರೀ ಅಸನಸ ಅಲಿಸಾ ಮುಜಾವರ ಇವರ ಜಮೀನಿನಲ್ಲಿ ಕೃಷಿ ಹೊಂಡದ ನಿರ್ಮಾಣದ ಕಾಮಗಾರಿಯಲ್ಲಿ ಹಾಗೂ ಸಿಂಧಗಿ ತಾಲ್ಲೂಕಿನ ಬಿಂಜಲಬಾವಿ ಗ್ರಾಮದಲ್ಲಿ ಬಸನಗೌಡರ ಹೊಲದಿಂದ ಊರಿನಗೌಡರ ಹೊಲದವರೆಗೆ ರಸ್ತೆ ಸುಧಾರಣೆ ಕಾಮಗಾರಿಯಲ್ಲಿ ಕೂಲಿ ಕಾರ್ಮಿಕರಾಗಿ ದುಡಿದಿರುವುದಾಗಿ ತೋರಿಸಿದ್ದು, ಸದರಿ ಶ್ರೀಮತಿ ಪಾರ್ವತಿಯವರ ಹೇಳಿಕೆಯನ್ನು ತನಿಖಾಧಿಕಾರಿಯವರು ಪಡೆದಿದ್ದು, ಸದರಿ ಹೇಳಿಕೆಯಲ್ಲಿ ತಮ್ಮ ಜಾಬ್ ಕಾರ್ಡಿನಲ್ಲಿ

ತೋರಿಸಲಾಗಿರುವ ರೇಣುಕ ಮತ್ತು ಯಲ್ಲಮ್ಮ ಎಂಬ ಹೆಸರಿನವರು ಯಾರು ಎಂದು ಗೊತ್ತಿಲ್ಲವೆಂದು ಹಾಗೂ ತಮ್ಮ ಅತ್ತೆಯಾದ ಸಿದ್ದಮ್ಮ ನವರ ಹೆಸರನ್ನು ತೋರಿಸಿದ್ದು, ಅವರ ವಯಸ್ಸು 100 ವರ್ಷವಾಗಿ, 11 ತಿಂಗಳ ಹಿಂದೆ ಮರಣ ಹೊಂದಿರುತ್ತಾರೆಂದು ತಿಳಿಸಿರುತ್ತಾರೆ. ಆದ್ದರಿಂದ, ಸದರಿ ವ್ಯಕ್ತಿಗಳು ಮೇಲೆ ಹೇಳಿದ ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸಿರುವ ಬಗ್ಗೆ ಎನ್.ಎಂ.ಆರ್. ನಲ್ಲಿ ತೋರಿಸಿರುವುದು ಹಣದ ದುರುಪಯೋಗದ ಬಗ್ಗೆ ಸ್ಪಷ್ಟೀಕರಿಸುತ್ತದೆ. ಸದರಿಯವರ ಜಾಬ್ ಕಾರ್ಡಿನ ಪ್ರತಿಯನ್ನು ಹಾಜರುಪಡಿಸಲಾಗಿದೆ ಹಾಗೂ ಸದರಿ ಜಾಬ್ ಕಾರ್ಡ್ ಜೊತೆಯಲ್ಲಿ ಎನ್.ಎಂ.ಆರ್ ಪ್ರತಿಯನ್ನು ಸಹ ಅಳವಡಿಸಲಾಗಿದೆ. ಶ್ರೀಮತಿ ಹೇಮಾವತಿ ಮಾದರ ಇವರ ಜಾಬ್ ಕಾರ್ಡ್ ಅನ್ನು ಹಾಜರುಪಡಿಸಲಾಗಿದೆ. ಅದರಲ್ಲಿರುವ ಸದಸ್ಯರುಗಳು ಬಿಂಜಲಬಾವಿ ಗ್ರಾಮದಲ್ಲಿ ಭೀಮರಾಯ ರಸ್ತೆ ಸುಧಾರಣೆ ಕಾಮಗಾರಿಯಲ್ಲಿ, ಕಲಕೇರಿ ಗ್ರಾಮದಲ್ಲಿ ಅರಣ್ಯೀಕರಣ ಕಾಮಗಾರಿಯಲ್ಲಿ ಹಾಗೂ ಬಿಂಜಲಬಾವಿ ಗ್ರಾಮದ ಸೇದುಬಾವಿಯಿಂದ ಸರಪಂಚದ ಮನೆ ವರೆಗೆ ರಸ್ತೆ ಸುಧಾರಣೆ ಕಾಮಗಾರಿಯಲ್ಲಿ ಕೂಲಿ ಕಾರ್ಮಿಕರಾಗಿ ಕೆಲಸ ನಿರ್ವಹಿಸಿರುವುದಾಗಿ ತೋರಿಸಲಾಗಿರುತ್ತದೆ.

iv. ಕಲಕೇರಿ ಗ್ರಾಮದಲ್ಲಿ ಅರಣ್ಯೀಕರಣ ಕಾಮಗಾರಿಗೆ ಸಂಬಂಧಿಸಿದ ಕಾಮಗಾರಿಯ ದಾಖಲೆಗಳನ್ನು ಹಾಜರುಪಡಿಸಲಾಗಿದ್ದು, ಕಡತದಲ್ಲಿ ಹಾಜರುಪಡಿಸಿರುವ ನಮೂನೆ 6 ಮತ್ತು 8 ರಲ್ಲಿ ಪಿ.ಡಿ.ಒ ರವರು ಸಹಿ ಮಾಡಿರುವುದಿಲ್ಲ, ಇದಲ್ಲದೇ ತಾಂತ್ರಿಕ ಮಂಜೂರಾತಿ ಆದೇಶ, ಅಳತೆ ಪುಸ್ತಕದ ಪ್ರತಿ, ಎಫ್ ಅಂಡ್ ಎಫ್ ಬಿಲ್ಲು ಮತ್ತು ಕಾಮಗಾರಿ ಮುಕ್ತಾಯಗೊಂಡ ಪ್ರಮಾಣಪತ್ರ ಇವುಗಳಲ್ಲಿ ಯಾವ ಅಧಿಕಾರಿ ಸಹಿ ಮಾಡಿರುವುದು ಕಂಡು ಬರುವುದಿಲ್ಲ. ಸದರಿ ಅರಣ್ಯೀಕರಣ ಕಾಮಗಾರಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಲಾಗಿದೆ. ಬಿಂಜಲಬಾವಿ ಗ್ರಾಮದ ಸೇದುಬಾವಿಯಿಂದ ಸರಪಂಚದ ಮನೆವರೆಗೆ ರಸ್ತೆ ಸುಧಾರಣೆ ಕಾಮಗಾರಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಲಾಗಿದೆ. ಸದರಿ ಕಾಮಗಾರಿಯ ಬೇರೆ, ಬೇರೆ ಹಂತದ ಪೋಟೋಗಳನ್ನು ಅಳವಡಿಸಿರುವುದಿಲ್ಲ. ಎಂಐಎಸ್ ಶೀಟ್, ಕಾಮಗಾರಿಯ ಎಫ್ ಅಂಡ್ ಎಫ್ ಬಿಲ್ಲು, ಕೂಲಿ ಕಾರ್ಮಿಕರಿಗೆ ಅವರ ಬ್ಯಾಂಕ್ ಖಾತೆಗಳಿಗೆ ಹಣ ಸಂದಾಯ ಮಾಡಿದ ದಾಖಲೆ ಯಾವುದು ಇರುವುದಿಲ್ಲ. ಬಿಂಜಲಬಾವಿ ಗ್ರಾಮದ ಗೀರಮ್ಮ ಇವರ ಮನೆಯಿಂದ ನ್ಯಾಯಬೆಲೆ ಅಂಗಡಿ ವರೆಗೆ ರಸ್ತೆ ಸುಧಾರಣೆ ಕಾಮಗಾರಿ ದಾಖಲೆಗಳನ್ನು ಹಾಜರುಪಡಿಸಿದ್ದು, ಈ ಕಾಮಗಾರಿಗಳಿಗೆ

ಸಂಬಂಧಿಸಿದಂತೆ ಮೂರು ಹಂತದ ಛಾಯಾಚಿತ್ರಗಳನ್ನು ಎಫ಼ ಎಫ್ ಬಿಲ್ಲುಗಳನ್ನು ಹಾಗೂ ಕೂಲಿ ಕಾರ್ಮಿಕರಿಗೆ ಹಣ ಸಾಂದಾಯ ಮಾಡಿದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

v. ತನಿಖಾಧಿಕಾರಿಯವರು ಶ್ರೀಮತಿ ಪಾರ್ವತಿ ಇವರ ಹೇಳಿಕೆಯನ್ನು ಪಡೆದಿದ್ದು, ಇವರು ತಮ್ಮ ಹೇಳಿಕೆಯಲ್ಲಿ ತಾವು ನಿರ್ವಹಿಸಿದ ಕೆಲಸದ ಬಗ್ಗೆ ತಿಳಿಸಿದ್ದು, ಸದರಿ ಕಾಮಗಾರಿಗೂ ಮತ್ತು ದಾಖಲೆಯಲ್ಲಿ ತಿಳಿಸಿರುವ ಕಾಮಗಾರಿಗೆ ವ್ಯತ್ಯಾಸವಿರುತ್ತದೆ. ಶ್ರೀ ನಾಗಪ್ಪ ಮಾದರ್ ಇವರು ಕೂಲಿ ಕಾರ್ಮಿಕರಾಗಿ ಕೆಲಸ ನಿರ್ವಹಿಸಿದ ಬಗ್ಗೆ ದಾಖಲೆಯಲ್ಲಿ ತೋರಿಸಲಾಗಿದ್ದು, ಇವರ ಜಾಬ್ ಕಾರ್ಡ್ ಪ್ರತಿಯನ್ನು ಹಾಜರುಪಡಿಸಲಾಗಿದೆ. ಸದರಿ ನಾಗಪ್ಪ ಮಾದರ್ ಇವರ ಕುಟುಂಬ ವರ್ಗದವರು ಕಲಕೇರಿ ಗ್ರಾಮದಲ್ಲಿ ಅರಣ್ಯೀಕರಣದ ಕಾಮಗಾರಿಯಲ್ಲಿ, ಬಿಂಜಲಬಾವಿ ಗ್ರಾಮದ ಗಿರಮ್ಮ ಇವರ ಮನೆಯಿಂದ ನ್ಯಾಯಬೆಲೆ ಅಂಗಡಿ ವರೆಗೆ ರಸ್ತೆ ಸುಧಾರಣೆ ಕಾಮಗಾರಿಯಲ್ಲಿ ಹಾಗೂ ಬಿಂಜಲಬಾವಿ ಗ್ರಾಮದ ಭೀಮರಾಯ ರಸ್ತೆ ಸುಧಾರಣೆ ಕಾಮಗಾರಿಯಲ್ಲಿ ಮತ್ತು ಬಿಂಜಲಬಾವಿ ಗ್ರಾಮದ ಸೇದುಬಾವಿಯಿಂದ ಸರಪಂಚದ ಮನೆವರೆಗೆ ರಸ್ತೆ ಸುಧಾರಣೆ ಕಾಮಗಾರಿಯಲ್ಲಿ ಕೂಲಿ ಕಾರ್ಮಿಕರಾಗಿ ಕೆಲಸ ನಿರ್ವಹಿಸಿರುವುದಾಗಿ ದಾಖಲೆಗಳಿದ್ದು, ಸದರಿ ನಾಗಪ್ಪ ಮಾದರ್ ಅವರ ಜಾಬ್ ಕಾರ್ಡಿನಲ್ಲಿರುವ ಸದಸ್ಯರಾದ ಶ್ರೀ ಗೊಲ್ಲಾಳಪ್ಪ ಇವರ ಹೇಳಿಕೆಯನ್ನು ತನಿಖಾಧಿಕಾರಿಯವರು ಪಡೆದಿದ್ದು, ಅದರಲ್ಲಿ ಸದರಿ ನಾಗಪ್ಪ ಮಾದರ್ ಇವರು 4-5 ವರ್ಷಗಳಿಂದ ಮುಂಬೈಯಲ್ಲಿ ದುಡಿಯಲಿಕ್ಕೆ ಹೋಗಿರುವುದಾಗಿ ತಿಳಿಸಿರುತ್ತಾರೆ. ಇದಲ್ಲದೇ, ಸದರಿ ಜಾಬ್ ಕಾರ್ಡ ನಲ್ಲಿರುವ ಕಾಸಪ್ಪ ಇವರು 2 ವರ್ಷದ ಹಿಂದೆ ಕಲಕೇರಿ ಗ್ರಾಮಪಂಚಾಯತಿ ಅಧ್ಯಕ್ಷರಾಗಿರುತ್ತಾರೆಂದು ತಿಳಿಸಿರುತ್ತಾರೆ.

8. ದೂರಿನಂಶಗಳನ್ನು ಆಪಾದಿತ ಸರ್ಕಾರಿ ನೌಕರರು ಸಲ್ಲಿಸಿರುವ ಆಕ್ಷೇಪಣೆಯನ್ನು ಕಡತದಲ್ಲಿ ಹಾಜರುಪಡಿಸಲಾಗಿರುವ ದಾಖಲೆಯನ್ನು, ತನಿಖಾಧಿಕಾರಿಯವರ ವರದಿಯನ್ನು ಪರಿಶೀಲಿಸಿದಲ್ಲಿ, ಆಪಾದಿತ ಸರ್ಕಾರಿ ನೌಕರರು ದೂರುದಾರರು ತಿಳಿಸಿರುವಂತೆ, 2012-13, 2013-14ನೇ ಸಾಲಿನ ನರೇಗಾ ಯೋಜನೆಯಡಿಯಲ್ಲಿ ಹಾಗೂ 13ನೇ ಹಣಕಾಸಿನ ಅನುದಾನದ ಅಡಿಯಲ್ಲಿ ಹಲವಾರು ಕಾಮಗಾರಿಗಳನ್ನು ಕೈಗೊಂಡಿದ್ದಾಗಿ ದಾಖಲೆಗಳಲ್ಲಿ ತೋರಿಸಿ, ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಕೆಲಸ ನಿರ್ವಹಿಸದೇ ಇರುವ ಕೂಲಿ ಕಾರ್ಮಿಕರ ಹೆಸರಿನಲ್ಲಿ, ಎನ್.ಎಂ.ಆರ್ ಗಳನ್ನು ಸೃಷ್ಟಿಸಿ ಹಣವನ್ನು

ದುರುಪಯೋಗಪಡಿಸಿಕೊಂಡಿರುವುದು ಮೇಲಿನ ಸಾಕ್ಷ್ಯಾಧಾರಗಳಿಂದ ಮೇಲ್ನೋಟಕ್ಕೆ ಸ್ಪಷ್ಟಪಟ್ಟಿರುತ್ತದೆ. ಆದುದರಿಂದ, ಆಪಾದಿತ ಸರ್ಕಾರಿ ನೌಕರರು ಸರ್ಕಾರಿ/ಸಾರ್ವಜನಿಕ ನೌಕರರುಗಳಾಗಿದ್ದು, ತಮ್ಮ ಸ್ಥಾನವನ್ನು ದುರುಪಯೋಗಪಡಿಸಿಕೊಂಡು, ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ಸ್ಪಷ್ಟ ಪಡುತ್ತದೆ.

9. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಆಪಾದಿತ ಸರ್ಕಾರಿ ನೌಕರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಆಪಾದಿತ ಸರ್ಕಾರಿ ನೌಕರರು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

10. ದೂರು, ಆಪಾದಿತ ಸರ್ಕಾರಿ ನೌಕರ ಉತ್ತರ ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ಮೇಲ್ನೋಟಕ್ಕೆ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರಿಯುವುದು ಅಗತ್ಯ ಎಂದು ಕಂಡುಬಂದಿದ್ದು, ಆಪಾದಿತ ಸರ್ಕಾರಿ ನೌಕರರು ಸರ್ಕಾರಿ ಸೇವಕರಾಗಿದ್ದು ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ.

11. ಹಾಗೂ ಆಪಾದಿತ ಸರ್ಕಾರಿ ನೌಕರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ ನಿಯಮ 3(1)ರ ಅಡಿಯಲ್ಲಿ ದುರ್ವರ್ತನೆ/ದುರ್ನಡತೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ಅಡಿಯಲ್ಲಿ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆಗೆ ಶಿಫಾರಸ್ಸು ಮಾಡಲಾಗಿ, ಶಿಸ್ತು ನಡವಳಿಕೆಯನ್ನು ಆಪಾದಿತ ಸರ್ಕಾರಿ ನೌಕರರ ವಿರುದ್ಧ ನಿಯಮ 14 ಎ ಅಡಿಯಲ್ಲಿ, ಇಲಾಖಾ ವಿಚಾರಣೆಯನ್ನು ನಡೆಸಲು ಶಿಸ್ತು ಪ್ರಾಧಿಕಾರಿಯಾದ ಸರ್ಕಾರ ಉಲ್ಲೇಖ (2)ರ ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರವರಿಗೆ

ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತರವರು ಅಪರ ನಿಬಂಧಕರು (ವಿಚಾರಣೆಗಳು 10) ಇವರನ್ನು ವಿಚಾರಣೆ ನಡೆಸಲು ನೇಮಕ ಮಾಡಿದ್ದಾರೆ. ಆದ್ದರಿಂದ, **ನಿಮ್ಮ ವಿರುದ್ಧ ಈ ಮೇಲ್ಕಂಡ ಆಪಾದನೆ.**

**7.** ಈ ಮೇಲ್ಕಂಡ ದೋಷಾರೋಪಣೆ (ಆರ್ಟಿಕಲ್ ಆಫ್ ಚಾರ್ಜ್) ಆ.ಸ.ನೌ ರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ ರವರು ದಿನಾಂಕ 27/02/2017 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿದ್ದು, ಅವರ ಪ್ರಥಮ ಮೌಖಿಕ ಹೇಳಿಕೆಯನ್ನು ನಿಯಮ-11(9) ಕೆ.ಸಿ.ಎಸ್. ಸಿಸಿಎ ರೂಲ್ಸ್ 1957ರ ಅಡಿಯಲ್ಲಿ ದಾಖಲಿಸಿಕೊಳ್ಳಲಾಗಿರುತ್ತದೆ. ಆ.ಸ.ನೌ ರವರು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

8. ಆ.ಸ.ನೌ ರವರಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

9. ಆ.ಸ.ನೌ ರವರು ತಮ್ಮ ಲಿಖಿತ ರಕ್ಷಣಾ ಹೇಳಿಕೆಯನ್ನು ದಿನಾಂಕ 10/04/2017 ರಂದು ಸಲ್ಲಿಸಿ, ದೋಷಾರೋಪಣೆಯಲ್ಲಿ ಮಾಡಿರುವ ಆರೋಪಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ,

10. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ **ಶ್ರೀ ಅಮರೇಶ್ ದೇಸಾಯಿ** ರವರನ್ನು ಪಿ.ಡಬ್ಲ್ಯೂ.1 ಎಂದು, **ಶ್ರೀ ನಂದೇಶ್ವರ ಕುಂಬಾರ,** ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬಿಜಾಪುರ (ತನಿಖಾಧಿಕಾರಿ) ರವರುಗಳನ್ನು ಸಾಕ್ಷ್ಯ ನುಡಿಸಿಕೊಂಡು **ನಿ.ಪಿ.-1 ರಿಂದ 20** ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತದನಂತರ, ಆ.ಸ.ನೌ ರವರ ದ್ವಿತೀಯ ಮೌಖಿಕ ಹೇಳಿಕೆಯನ್ನು ದಿನಾಂಕ 16/03/2021 ರಂದು ಪಡೆದುಕೊಳ್ಳಲಾಗಿರುತ್ತದೆ.

11. ಆಪಾದಿತ ಸರ್ಕಾರಿ ನೌಕರ ಶ್ರೀ **ಎಲ್.ಹೆಚ್. ನಾವಿ** ತಮ್ಮ ಪರವಾಗಿ ತಾವೇ **ಡಿ.ಡಬ್ಲ್ಯೂ.–1** ಎಂದು ವಿಚಾರಣೆ ಮಾಡಿಕೊಂಡು ಯಾವುದೇ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

12. ಉಭಯ ಪಕ್ಷದವರ ಪರವಾಗಿ ಮಂಡನಾಧಿಕಾರಿಗಳ ವಾದ ವಿವಾದವನ್ನು ಮತ್ತು ಆ.ಸ.ನೌ ರವರ ಪರ ಲಿಖಿತ ವಾದವನ್ನು ಪರಿಶೀಲಿಸಲಾಯಿತು.

13. ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ ರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತು ಪಡಿಸಿದೆಯೇ?

**ಅಂಶ–2:** ಆದೇಶವೇನು?

14. ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

15. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ.

**ಅಂಶ 1: ಸಕರಾತ್ಮಕವಾಗಿ**

**ಅಂಶ 2: ಅಂತಿಮ ಆದೇಶದಂತೆ**

**<u>ಕಾರಣಗಳು:</u>**

16. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ ಶ್ರೀ **ಅಮರೇಶ್**

**ದೇಸಾಯಿ** ರವರನ್ನು ಪಿ.ಡಬ್ಲ್ಯೂ.1 ಎಂದು, **ಶ್ರೀ ನಂದೇಶ್ವರ ಕುಂಬಾರ,** ಪೊಲೀಸ್ ನಿರೀಕ್ಷಕರು,. ಕರ್ನಾಟಕ ಲೋಕಾಯುಕ್ತ, ಬಿಜಾಪುರ (ತನಿಖಾಧಿಕಾರಿ) ರವರುಗಳನ್ನು ಸಾಕ್ಷ್ಯ ನುಡಿಸಿಕೊಂಡು **ನಿ.ಪಿ.–1** ರಿಂದ **20** ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ.

17. **ದೂರುದಾರ ಶ್ರೀ ಅಮರೇಶ್ ದೇಸಾಯಿ ಪಿ.ಡಬ್ಲ್ಯೂ–1 ರವರು** ತಮ್ಮ ಮುಖ್ಯ ವಿಚಾರಣೆಯಲ್ಲಿ, ಆಪಾದಿತ ಸರ್ಕಾರಿ ನೌಕರ **ಶ್ರೀ ಎಲ್.ಹೆಚ್. ನಾವಿ** 2013–14 ನೇ ಸಾಲಿನಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಕಲಕೇರಿ ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ನರೇಗಾ ಯೋಜನೆಯಡಿಯಲ್ಲಿ ರಸ್ತೆ ಸುಧಾರಣೆ ಕಾಮಗಾರಿಗೆ ಸಂಬಂಧಿಸಿದಂತೆ ಸಿಂಧಗಿ ತಾಲ್ಲೂಕಿನ ಬಿಂಜಲಬಾವಿ ಗ್ರಾಮದಲ್ಲಿ ಶ್ರೀ ರಾಮನಗೌಡ ಹೊಸಗೌಡರ ಇವರ ಹೊಲದಿಂದ ಶ್ರೀ ಆನಂದ ಗೌಡ ಇವರ ಹೊಲದವರೆಗೆ ಕೈಗೆತ್ತಿಕೊಂಡಿದ್ದು, ನಮೂನೆ–6 ರಲ್ಲಿ ಗ್ರಾಮ ಪಂಚಾಯತಿಯ ಯಾವುದೇ ಅಧಿಕಾರಿಯ ಸಹಿ ಇರುವುದಿಲ್ಲ, ಕೂಲಿಕಾರರಿಗೆ ಅವರ ಬ್ಯಾಂಕ್ ಖಾತೆಗೆ ಹಣ ಸಂದಾಯ ಮಾಡಿರುವ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. ಕೂಲಿ ಕಾರ್ಮಿಕರ ಮಸ್ಟರ್ ರೋಲ್‌ನ್ನು ದೂರನ್ನು ಸಲ್ಲಿಸಿದ ನಂತರ ತಯಾರಿಸಿರುವುದು ಕಂಡು ಬರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

18. ಪಿಡಬ್ಲ್ಯೂ–1 ದೂರುದಾರರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, 2013–14ನೇ ಸಾಲಿನ ಕಲಕೇರಿ ಗ್ರಾಮ ಪಂಚಾಯತಿಯ ನರೇಗಾ ಯೋಜನೆಯಡಿ ಶ್ರೀ ಜಟ್ಟಪ್ಪ ರವರ ಜಮೀನಿನಲ್ಲಿ ಭೂಮಿ ಅಭಿವೃದ್ದಿಗಾಗಿ ಖರ್ಚು ಮಾಡಿರುವ ಬಗ್ಗೆ ಅಳತೆ ಪುಸ್ತಕದಲ್ಲಿ ಯಾವುದೇ ಸಹಿ ಇರುವುದು ಕಂಡು ಬಂದಿರುವುದಿಲ್ಲ. ಶ್ರೀ ಹಿರೇಣ್ಣ ಝುಳಕಿ ರವರು ಮೃತ ಹೊಂದಿದ್ದು ಅವರ ಹೆಸರನ್ನು ಎನ್.ಎಮ್.ಆರ್ ನಲ್ಲಿ ತೋರಿಸಿದ್ದು, ಶ್ರೀ ಸಿದ್ದಣ್ಣ ಅಸ್ಕಿ, ಉಜ್ಜಿಂದ್ರ ಟಕ್ಕಾಪುರ, ಉಮಾಶ್ರೀ, ಶಿವಣ್ಣ ಬಾದಲ್ ನರೇಗಾದಲ್ಲಿ ಕೂಲಿ ಕೆಲಸ ಮಾಡದಿದ್ದರೂ ಅವರ ಬ್ಯಾಂಕ್

ಖಾತೆಗೆ ಹಣ ಸಂದಾಯವಾಗಿರುತ್ತದೆ. ಬಿಂಜಲಬಾವಿ ಗ್ರಾಮದ ಶ್ರೀ ಭೀಮಪ್ಪ ರಾಮಪ್ಪ ಮಾದರ ಇವರ ಹೊಲದಲ್ಲಿ ದನದ ಶೆಡ್ ನಿರ್ಮಾಣ ಕಾಮಗಾರಿಯನ್ನು ಫಲಾನುಭವಿಯಾದ ಶ್ರೀ ಹೀರಣ್ಣ ಶಿವಬಸಪ್ಪ ಝುಳಕಿ ಅವರು ತನ್ನ ಜಾಬ್ ಕಾರ್ಡಿನಲ್ಲಿ 5 ಜನರ ಹೆಸರನ್ನು ತೋರಿಸಿದ್ದು, ಅದರಲ್ಲಿ ತಮ್ಮ ಪತ್ನಿ ಪುಷ್ಪಾವತಿ ಮತ್ತು ತಮ್ಮನಾದ ಬಸವರಾಜು ಅವರ ಹೆಸರನ್ನು ಬರೆಯಲಾಗಿದ್ದು ಇನ್ನುಳಿದ ಮೂರು ಜನ ಸದಸ್ಯರು ಶ್ರೀಮತಿ ಬೋರಮ್ಮ, ಶ್ರೀಮತಿ ಮಲ್ಲು ಹಾಗೂ ಶ್ರೀಮತಿ ಸುವರ್ಣ ಅವರ ಹೆಸರಿಗೆ ತೋರಿಸಿ ಹಣವನ್ನು ಸಂದಾಯ ಮಾಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

19. ಪಿಡಬ್ಲ್ಯೂ-1 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಶ್ರೀಮತಿ ಹಸನಸ ಅಲಿಸ ಮುಜಾವರ ಇವರ ಜಮೀನಿನಲ್ಲಿ ಕೃಷಿ ಹೊಂಡ ನಿರ್ಮಾಣ ಕಾಮಗರಿ ಕೈಗೊಂಡಿರುವುದಿಲ್ಲ, ಯಂತ್ರಗಳನ್ನು ಉಪಯೋಗಿಸಿ ಕಾಮಗಾರಿಗಳನ್ನು ಮಾಡಿರುತ್ತಾರೆ, ಜಾಬ್ ಕಾರ್ಡ್‌ನ್ನು ಊರಿನಲ್ಲಿ ವಾಸವಿಲ್ಲದವರಿಗೂ ಸಹ ಕೊಟ್ಟಿರುತ್ತಾರೆ ಹಾಗೂ ಶಾಲಾ ಮಕ್ಕಳಿಗೂ ಸಹ ಎನ್.ಎಂ.ಆರ್. ನಲ್ಲಿ ಸೇರಿಸಲಾಗಿದೆಯೆಂದು, ಈ ಬಗ್ಗೆ ತಾನು ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಮನವಿ ಸಲ್ಲಿಸಿದ್ದು, ನಂತರ ಲೋಕಾಯುಕ್ತ ಸಂಸ್ಥೆಗೆ ನಮೂನೆ-1 ಮತ್ತು 2 ರಲ್ಲಿ ದೂರು ಸಲ್ಲಸಿದ್ದು ಅದು **ನಿ.ಪಿ-1 ರಿಂದ 3** ಎಂದು ಗುರುತಿಸಲಾಗಿರುತ್ತದೆ. 2 ಫೋಟೋ ಗ್ರಾಪ್ **ನಿ.ಪಿ-4 ಎಂದು,** ಫಲಾನುಭವಿಗಳ ಪಟ್ಟಿ ನಿ.ಪಿ-5 ಮತ್ತು ದೂರುದಾರರ ಪ್ರತ್ಯುತ್ತರ **ನಿ.ಪಿ-6** ಎಂದು ಗುರುತಿಸಿದ್ದು, ಆಪಾದಿತ ಸರ್ಕಾರಿ ನೌಕರರು ದುರ್ನಡತೆ ಎಸಗಿ ಕಾರಣಕರ್ತರಾಗಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ.

20. ಪಿಡಬ್ಲ್ಯೂ-2 ಶ್ರೀ **ನಂದೇಶ್ವರ ಕುಂಬಾರ,** ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬಿಜಾಪುರ (ತನಿಖಾಧಿಕಾರಿ) ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆಪಾದಿತ ಸರ್ಕಾರಿ ಅಧಿಕಾರಿ ಶ್ರೀ ಹೆಚ್.ಎಲ್. ನಾಪಿರವರು ಆ ಸಮಯದಲ್ಲಿ ಕಲ್ಕೇರಿ ಗ್ರಾಮ ಪಂಚಾಯತಿಯಲ್ಲಿ ಪಿ.ಡಿ.ಓ ಆಗಿ

ಕೆಲಸ ನಿರ್ವಹಿಸುತ್ತಿದ್ದರು. ದೂರಿನಲ್ಲಿರುವ ವಿಷಯ ಹಾಗೂ ಲಗತ್ತಾಗಿರುವ ದಾಖಲೆಗಳನ್ನು ಪರಿಶೀಲಿಸಿದೆ. ದೂರಿನಲ್ಲಿರುವ ಆಪಾದನೆಗೆ ಸಂಬಂಧಿಸಿದಂತೆ, ಕಲ್ಕೇರಿ ಗ್ರಾಮ ಪಂಚಾಯತಿಗೆ ದಿ:05–05–2016ರಂದು ಭೇಟಿ ನೀಡಿ, ಅನಧೀಕೃತ ನಕಲಿ ಜಾಬ್ ಕಾರ್ಡ್‌ಗಳನ್ನು ಹೊಂದಿರುವವರ ವಿವರವನ್ನು ಪಡೆದು, 4 ಜನ ಸಾಕ್ಷಿದಾರರಾದ ಸಿದ್ದಣ್ಣ ಅಸ್ಕಿ, ಪಾರ್ವತಿ ಟೋಕಾಪುರ್,ಶಿವಪ್ಪ, ಬ್ಯಾಲಾಳ್ ಪ್ರೇಮಾವತಿ ಮಾದರ್ ರವರ ಹೇಳಿಕೆ ಪಡೆದುಕೊಂಡೆ. ಸಿದ್ದಣ್ಣ ಅಸ್ಕಿ ಹೇಳಿಕೆಗಳನ್ನು ಪಡೆದುಕೊಂಡೆ. ನಂತರ ದಿ:24–06–2016ರಂದು ಈರಣ್ಣ ಝುಳ್ಕಿರವರ ಹೇಳಿಕೆಯನ್ನು ಪಡೆದುಕೊಂಡೆ ಹಾಗೂ ದಿ:13–07–2016ರಂದು ಸಾಕ್ಷಿದಾರರಾದ ಗೊಲ್ಲಾಳಪ್ಪ ಮಾದಪ್ಪ ರವರ ಹೇಳಿಕೆಯನ್ನು ಪಡೆದುಕೊಂಡೆ. ಗ್ರಾಮ ಪಂಚಾಯತಿಯಿಂದ ಅರ್ಜಿಯಲ್ಲಿ ನಮೂದಿಸಿದ ಈ ಮೇಲ್ಕಾಣಿಸಿದ ವ್ಯಕ್ತಿಗಳ ಹೆಸರಿನ ಜಾಬ್ ಕಾರ್ಡ್ ಮಾಹಿತಿಯನ್ನು ಹಾಗೂ ಕೂಲಿಕಾರರು ಅಂತ ಕೆಲಸ ಮಾಡಿದ ಕಾಮಗಾರಿಗಳ ಕಡತಗಳನ್ನು ಪಂಚಾಯತಿಯಿಂದ ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡದಿರುತ್ತಾರೆ.

21. ಪಿಡಬ್ಲ್ಯೂ–2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಈರಣ್ಣ ಝುಳ್ಕಿ ರವರ ಬಗ್ಗೆ ವಿಚಾರಣೆಯಲ್ಲಿ ಮಾಹಿತಿಯನ್ನು ಸಂಗ್ರಹಿಸಿದಾಗ ತಿಳಿದುಬಂದಿದ್ದೇನೆಂದರೆ, ಸದರಿಯವರ ಜಾಬ್ ಕಾರ್ಡ ನಂ.1325 ನೇಯ್ದಿದ್ದು, ಸದರಿ ಜಾಬ್ ಕಾರ್ಡನಲ್ಲಿ ಪಾರ್ವತಿ, ಬಸವರಾಜು, ಬೋರಮ್ಮ, ಮಲ್ಲು ಸುವರ್ಣ ರವರನ್ನು ಸದಸ್ಯರು ಎಂದು ನಮೂದಿಸಲಾಗಿದೆ. ಸದರಿ ಈರಣ್ಣ ರವರು ಜಟ್ಟೆಪ್ಪ ಸಾಹೇಬ ಕೃಷಿ ಹೊಂಡ ಕಾಮಗಾರಿ ಕೈಗೊಂಡು ಒಟ್ಟು ರೂ.6,876/–ಗಳ ಕೂಲಿ ಹಣ ಪಾವತಿ ಮಾಡಿರುವ ಬಗ್ಗೆ ನಮೂದಿರುತ್ತದೆ. ಕಾಮಗಾರಿ ಕಡತವನ್ನು ಸರಿಯಾಗಿ ನಿರ್ವಹಣೆ ಮಾಡಿರುವುದಿಲ್ಲ. ಅಂದರೆ ನಮೂನೆ 06, ಅಳತೆ ಪುಸ್ತಕ ಪುಟ–5ರಲ್ಲಿ ಸಹಿ ಇರುವುದಿಲ್ಲ. ಕಾಮಗಾರಿ ಪ್ರಮಾಣ ಪತ್ರ ಇದ್ದು, ಅದರಲ್ಲಿ ಇಲಾಖೆಗೆ ಸಂಬಂಧಿಸಿದ ಅಧಿಕಾರಿಗಳ ಸಹಿ ಇರುವುದಿಲ್ಲ. ಈರಣ್ಣ ಝುಳ್ಕಿ ಇವರಿಗೆ ಸಂಬಂಧಿಸಿದ ದಾಖಲೆಗಳನ್ನು ನೋಡಿದ್ದು, ಅವುಗಳನ್ನು ಕ್ರಮವಾಗಿ ***ನಿಶಾನೆ ಪಿ–7(5–ಪುಟಗಳು)*** ಎಂದು ಗುರುತಿಸಲಾಯಿತು.

11/3

22. ಪಿಡಬ್ಲ್ಯೂ-2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಜಟ್ಟೆಪ್ಪ ಇವರ ಕೃಷಿ ಹೊಂಡದ ಕಾಮಗಾರಿಯಲ್ಲಿ ನಾನು ಪಡೆದುಕೊಂಡ ತನಿಖೆಯಲ್ಲಿ ಪಡೆದುಕೊಂಡ ದಾಖಲೆಗಳನ್ನು ನೋಡಿದ್ದು, ಅದನ್ನು ***ನಿಶಾನೆ ಪಿ-8*** ಎಂದು ಗುರುತಿಸಲಾಯಿತು (ಪುಟ ಸಂಖ್ಯೆ 35-47). ಈ ದಾಖಲೆಗಳ ಪೈಕಿ ಪುಟ ಸಂಖ್ಯೆ 36-ಕಾಮಗಾರಿ ಪೂರ್ಣ ಗೊಂಡ ಪ್ರಮಾಣಪತ್ರಕ್ಕೆ ಜಲಾನಯನ ಅಧಿಕಾರಿಯ ಸಹಿ ಇರುವುದಿಲ್ಲ. ಇದೇ ಕಾಮಗಾರಿಗೆ ಸಂಬಂಧಿಸಿದಂತೆ ಅಳತೆ ಪುಸ್ತಕ ಪುಟ ಸಂಖ್ಯೆ-38 ಮತ್ತು 47, ನಮೂನೆ-6 ಕೆಲಸಕ್ಕಾಗಿ ಅರ್ಜಿಯಲ್ಲಿ ಸಂಬಂಧಿಸಿದ ಅಧಿಕಾರಿಗಳ ರುಜು ಇರುವುದಿಲ್ಲ.

23. ಪಿಡಬ್ಲ್ಯೂ-2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ನಂತರ ಸಿಂಧಗಿ ತಾಲ್ಲೂಕಿನ ಬಿಂಜಲಬಾವಿ ಗ್ರಾಮದಲ್ಲಿ ರಾಮನಗೌಡ ಹೊಸಗೌಡ್ರು ಇವರ ಹೊಲದಿಂದ ಆನಂದಗೌಡ ರವರ ಹೊಲದವರೆಗೆ ರಸ್ತೆ ಸುಧಾರಣೆ ಕಾಮಗಾರಿಯ ಕಡತವನ್ನು ಪರಿಶೀಲಿಸಿದ್ದು, ಇದರಲ್ಲಿ 2 ಬಾರಿ ತಲಾ 6,876/- ರೂ.ಗಳ ಕೂಲಿ ಹಣ ಪಾವತಿ ಮಾಡಿದ ಬಗ್ಗೆ ನಮೂದು ಇರುತ್ತದೆ. ಸದರಿ ಕಾಮಗಾರಿ ಮುಕ್ತಾಯಗೊಂಡ ಪ್ರಮಾಣ ಪತ್ರಕ್ಕೆ ಸಂಬಂಧಿಸಿದ ಅಧಿಕಾರಿಯ ರುಜು ಇರುವುದಿಲ್ಲ. ನಂತರ ನಮೂನೆ-6ಕ್ಕೆ ಪಂಚಾಯಿತಿ ಅಧಿಕಾರಿಗಳ ಸಹಿ ಇರುವುದಿಲ್ಲ. ಸದರಿ ಕಾಮಗಾರಿಗೆ ಸಂಬಂಧಿಸಿದ ದಾಖಲೆಗಳನ್ನು ನಾನು ನೋಡಿದ್ದು, ***ನಿಶಾನೆ ಪಿ-9*** ಎಂದು(ಪುಟ ಸಂಖ್ಯೆ 48-69) ಗುರುತಿಸಲಾಯಿತು.

24. ಪಿಡಬ್ಲ್ಯೂ-2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಪುಟ ಸಂಖ್ಯೆ:50 ಮತ್ತು 69 ರಲ್ಲಿ ನಮೂನೆ 6 ಇದ್ದು ಇವುಗಳಿಗೆ ಪಂಚಾಯತಿ ಅಧಿಕಾರಿ ರುಜು ಇರುವುದಿಲ್ಲ. ಪುಟ ಸಂ.63ರಲ್ಲಿ ಅಳತೆ ಪುಸ್ತಕವಿದ್ದು ಅದಕ್ಕೆ ಸಂಬಂಧಪಟ್ಟ ಅಧಿಕಾರಿಯ ರುಜು ಇರುವುದಿಲ್ಲ. ಈ ಕಾಮಗಾರಿಯು 2013-14ನೇ ಸಾಲಿನ ನರೇಗಾ ಯೋಜನೆಗೆ ಸಂಬಂಧಪಟ್ಟಿರುತ್ತದೆ. ಕೂಲಿಕಾರರ ಬ್ಯಾಂಕ್ ಖಾತೆಗೆ ಕೂಲಿ ಹಣ ಸಂದಾಯವಾದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲಿಲ್ಲ. ಈರಣ್ಣ ಝುಳ್ಕಿ ರವರು ತಮ್ಮ ಹೇಳಿಕೆಯಲ್ಲಿ ಸದರಿರವರ ಜಾಬ್ ಕಾರ್ಡ್‌ನಲ್ಲಿರುವ ಬೋರಮ್ಮ, ಮಲ್ಲು, ಸುವರ್ಣ ಎಂಬುವವರು ಯಾರು ಎಂಬುದು ನನಗೆ ಗೊತ್ತಿಲ್ಲ ಅಲ್ಲದೆ ಅವರು ನಮ್ಮ ಕುಟುಂಬದ

ಸದಸ್ಯರಲ್ಲ ಎಂದು ಹೇಳಿಕೆ ಕೊಟ್ಟಿರುತ್ತಾರೆ.. ಇದರಿಂದ ಸದರಿಯವರು ಸುಳ್ಳು ಹೆಸರಿನ ಜಾಬ್. ಕಾರ್ಡ್ ಸೃಷ್ಟಿಸಿ ಮೇಲೆ ನಮೂದಿಸಿದ ಕಾಮಗಾರಿಗಳಲ್ಲಿ ಕೂಲಿಕಾರರಾಗಿ ಕೆಲಸ ಮಾಡಿದ ಬಗ್ಗೆ ಕಂಡು ಬರುವುದಿಲ್ಲ.

25. ಪಿಡಬ್ಲ್ಯೂ-2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಸಿದ್ದಣ್ಣ ಅಸ್ಕಿ ಎಂಬುವವರ ವಿಚಾರಣೆಯಲ್ಲಿ ಮತ್ತು ದಾಖಲೆಗಳನ್ನು ಸಂಗ್ರಹಿಸಿ ಪರಿಶೀಲಿಸಲಾಗಿ, ಸಿದ್ದಣ್ಣ ಅಸ್ಕಿ ಜಾಬ್ ಕಾರ್ಡ ಸಂ.1352 ಇದ್ದು, ಜಾಬ್ ಕಾರ್ಡ್‌ನಲ್ಲಿ ಗಾಯತ್ರಿ, ಕಸ್ತೂರಿಬಾಯಿ, ನಾಗಮ್ಮ, ರಮೇಶ್, ರೇಣುಕಾ, ಅನ್ನಪೂರ್ಣ ಮತ್ತು ಉಮೇಶ್‌ರವರುಗಳು ಸದಸ್ಯರಾಗಿ ಹೆಸರನ್ನು ನಮೂದಿಸಿರುತ್ತಾರೆ. ಸದರಿಯವರು ಹೇಳಿಕೆಯಲ್ಲಿ ರೇಣುಕಾ ಮತ್ತು ಅನ್ನಪೂರ್ಣ ರವರು ನಮ್ಮ ಮನೆಯ ಸದಸ್ಯರಲ್ಲ ಎಂದು ಹೇಳಿಕೆ ಕೊಟ್ಟಿರುತ್ತಾರೆ. ಸಿದ್ದಣ್ಣ ಅಸ್ಕಿ ಇವರ ಜಾಬ್ ಕಾರ್ಡ್ ನಂ.1352 ಇದು ಪುಟ ಸಂ.6–10ರಲ್ಲಿದ್ದು, ಅದನ್ನು ***ನಿಶಾನೆ ಪಿ–10*** ಎಂದು ಗುರುತಿಸಲಾಯಿತು. ಸಿದ್ದಣ್ಣ ಅಸ್ಕಿ ರವರು ಕೆಸರಟ್ಟಿ ಊರಲ್ಲಿ ಆರ್.ಎಂ.ಪಿ ವೈದ್ಯರಾಗಿದ್ದು, ಅವರ ಪತ್ನಿ ಶೀಲ ರವರು ಎಂ.ಎ.ಬಿಎಡ್.ಮಾಡಿ ಮನೆಕೆಲಸ ಮಾಡಿಕೊಂಡಿರುವುದಾಗಿ ಹೇಳಿಕೆಯಲ್ಲಿ ತಿಳಿಸಿರುತ್ತಾರೆ. ಅಲ್ಲದೆ ತನ್ನ ತಂಗಿ ನಾಗಮ್ಮ ಮುದ್ದೇಭಿಹಾಳದಲ್ಲಿ ವಾಸ ಇರುವ ಬಗ್ಗೆ, ಉಮೇಶ್ ಈತನು ತನ್ನ ಪತ್ನಿಯೊಂದಿಗೆ ಮಹಾರಾಷ್ಟ್ರದ ಸಾಂಗ್ಲಿಯಲ್ಲಿ 7–8 ವರ್ಷದಿಂದ ದುಡಿಯಲಿಕ್ಕೆ ಹೋಗಿ ವಾಸ ಇರುವ ಬಗ್ಗೆ ತಿಳಿಸಿರುತ್ತಾರೆ.ಹೀಗಾಗಿ ಅಸನ್ ಸಾಬ್ ಮುಜಾವರ್ ಇವರ ಜಮೀನಿನ ಕೃಷಿ ಹೊಂಡ ನಿರ್ಮಾಣ ಕಾಮಗಾರಿ ಮತ್ತು ಬಿಂಜಲಬಾವಿ ಗ್ರಾಮದಲ್ಲಿ ಬಸನಗೌಡ್ರ ಹೊಲದಿಂದ ಊರಿನ ಗೌಡ ಹೊಲದವರೆಗೆ ರಸ್ತೆ ಕಾಮಗಾರಿ, ಈ ಕಾಮಗಾರಿಗಳಲ್ಲಿ ಈ ಮೇಲೆ ಹೇಳಿದವರು ಕೂಲಿಕಾರರಾಗಿ ಕೆಲಸ ಮಾಡಿದಂತೆ ತೋರಿಸಿದ್ದು, ಅವರು ಕೆಲಸ ನಿರ್ವಹಿಸಿಲ್ಲ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಈ ಕಾಮಗಾರಿಗೆ ಸಂಬಂಧಿಸಿದ ದಾಖಲೆಗಳು ಪುಟ ಸಂ.71–105 ರವರೆಗೆ ಇದ್ದು ಅದನ್ನು ***ನಿಶಾನೆ–ಪಿ11*** ಎಂದು ಗುರುತಿಸಲಾಯಿತು.

26. ಪಿಡಬ್ಲ್ಯೂ-2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಈ ಕಾಮಗಾರಿಗೆ ಸಂಬಂಧಿಸಿದಂತೆ 6,8,9( ಪುಟ ಸಂ.76-81 ಕ್ಕೆ) ಸಂಬಂಧ ಪಟ್ಟ ಅಧಿಕಾರಿಗಳ ರುಜು ಇರುವುದಿಲ್ಲ. ಅದೇ ಪ್ರಕಾರ ಕಾಮಗಾರಿ ಪೂರ್ಣಗೊಂಡ ಪುಟ ಸಂ.71, 95 ರ ಪ್ರಮಾಣ ಪತ್ರಕ್ಕೆ ಸಂಬಂಧ ಪಟ್ಟ ಅಧಿಕಾರಿಯ ಸಹಿ ಇರುವುದಿಲ್ಲ.

27. ಪಿಡಬ್ಲ್ಯೂ-2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ನೀಲಮ್ಮ ಬ್ಯಾಲಳ್ ಇವರ ವಿಚಾರಣೆಯಲ್ಲಿ ಹಾಗೂ ದಾಖಲೆಗಳನ್ನು ಪರಿಶೀಲಿಸಲಾಗಿ ಇವರ ಜಾಬ್ ಕಾರ್ಡ ನಂ.1354 ಇದ್ದು, ಜಾಬ್ ಕಾರ್ಡ್ ನಲ್ಲಿ ಶಿವಪ್ಪ, ಬಸಪ್ಪ, ಭಾಗಮ್ಮ, ಮಡಿವಾಳಪ್ಪ, ಮಹದೇವಿ, ಮುತ್ತಪ್ಪ, ರೇಣುಕಾರವರುಗಳು ಒಟ್ಟು 8 ಜನ ಸದಸ್ಯರು ಇರುತ್ತಾರೆ.ನೀಲಮ್ಮ ಬ್ಯಾಲಾಳ್ ಇವರು ವಿಚಾರಣೆಗೆ ಸಿಗದಿರುವುದರಿಂದ ಅವರ ಗಂಡ ಶಿವಪ್ಪ ಬ್ಯಾಲಾಳ್ ಹೇಳಿಕೆ ನೀಡಿದ್ದಯು, ಜಾಬ್ ಕಾರ್ಡ ನಲ್ಲಿ ನಮೂದಿಸಿದ್ದ ಮುತ್ತಪ್ಪ ಇವರು ತನ್ನ ಅಪ್ರಾಪ್ತ ಮಗನಿದ್ದು, 8 ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡಿರುವ ಬಗ್ಗೆ ತಿಳಿಸಿರುತ್ತಾನೆ. ಹಾಗೂ ರೇಣುಕಾ ಇವಳು ಮಗಳಿದ್ದು, 4 ವರ್ಷಗಳ ಹಿಂದೆ ಮುದ್ದೇಬಿಹಾಳಕ್ಕೆ ಮದುವೆ ಮಾಡಿಕೊಟ್ಟ ಬಗ್ಗೆ ತಿಳಿಸಿರುತ್ತಾರೆ. ಅದೇ ರೀತಿ ಬಸಪ್ಪ ಮತ್ತು ಭಾಗಮ್ಮ ಅಣ್ಣ ಮತ್ತು ಅತ್ತಿಗೆ ರಿದ್ದು, ಅವರು ಸಿಂಧಗಿ ತಾಲ್ಲೂಕಿನಲ್ಲಿ ಉಪಜೀವಿಸುತ್ತಿರುವುದರ ಬಗ್ಗೆ, ಮಡಿವಾಳಪ್ಪ ಮತ್ತು ಮಹದೇವಿರವರು ಸುಮಾರು 8-10 ವರ್ಷಗಳಿಂದ ಗೋವಾ ದಲ್ಲಿ ದುಡಿಯಲು ವಾಸವಾಗಿರುವ ಬಗ್ಗೆ ತಿಳಿಸಿರುತ್ತಾರೆ.ಇದರಿಂದಾಗಿ, ಮೇಲ್ಕಂಡವರು ಅಸನ್ ರವರ ಜಮೀನಿನಲ್ಲಿ ಕೆಲಸ ಮಾಡದೇ ಇರುವುದು ಕಂಡು ಬರುತ್ತದೆ. ಸದರಿ ಬಗ್ಗೆ ದಾಖಲಾತಿಗಳನ್ನು ಪಡೆದುಕೊಂಡಿದ್ದು, ಪುಟ ಸಂ.11-12 ಅದನ್ನು ***ನಿಶಾನೆ ಪಿ-12*** ಎಂದು ಗುರುತಿಸಲಾಯಿತು.

28. ಪಿಡಬ್ಲ್ಯೂ-2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಪಾರ್ವತಿ ಟೋಕಾಪುರ್ ಇವರ ವಿಚಾರಣೆಯಲ್ಲಿ ಹಾಗೂ ದಾಖಲೆಗಳನ್ನು ಪರಿಶೀಲಿಸಲಾಗಿ ಇವರ ಹೆಸರಿನ ಜಾಬ್ ಕಾಡ್ ನಂ.1355 ನೇ ಸದರಿ ಜಾಬ್ ಕಾರ್ಡ ನಲ್ಲಿ ಸಾಹೆಬ್ ಗೌಡ,ಶ್ರೀ , ಸಿದ್ದಮ್ಮ, ರೇಣುಕಾ, ಯಲ್ಲಾಲಿಂಗ, ಬಸವರಾಜು, ಯಲ್ಲಮ್ಮ ರವರ ಹೆಸರುಗಳು ನಮೂದಾಗಿರುತ್ತದೆ.ಸದರಿಯವರ ಹೇಳಿಕೆಯಲ್ಲಿ

ಸಿದ್ದಮ್ಮ(23 ವರ್ಷ), ರೇಣುಕಾ(18ವರ್ಷ) ಮತ್ತು ಯಲ್ಲಮ್ಮ(21ವರ್ಷ) ಯಾರು ಎಂಬುದರ ಬಗ್ಗೆ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ. ಅಲ್ಲದೆ, ತನ್ನ ಅತ್ತೆ ಸಿದ್ದಮ್ಮ ಎಂಬುವವರಿಗೆ ಅಂದಾಜು ನೂರು ವರ್ಷ ವಯಸ್ಸಾಗಿದ್ದು, ಸುಮಾರು 11 ತಿಂಗಳ ಹಿಂದೆ ಮರಣ ಹೊಂದಿದ ಬಗ್ಗೆ ತಿಳಿಸಿರುತ್ತಾರೆ. ಹೀಗಾಗಿ ಅಸನ್ ಸಾ ಮುಜಾವರ್ ರವರ ಜಮೀನಿನಲ್ಲಿ ಮತ್ತು ಬಸನಗೌಡ್ರ ಹೊಲದಿಂದ ಊರಿನ ಗೌಡ್ರ ಹೊಲದವರೆಗೆ ಕಾಮಗಾರಿಯಲ್ಲಿ ಕೂಲಿಕಾರರಾಗಿ ನಿರ್ವಹಿಸಿರುವುದಿಲ್ಲ ಎಂದು ಕಂಡುಬರುತ್ತದೆ. ಸದರಿ ಬಗ್ಗೆ ದಾಖಲಾತಿಗಳನ್ನು ಪಡೆದುಕೊಂಡಿದ್ದು, ಪುಟ ಸಂ.13-16 ರವರೆಗೆ ಇದ್ದು, ***ನಿಶಾನೆ ಪಿ-13*** ಎಂದು ಗುರುತಿಸಲಾಯಿತು.

29. ಪಿಡಬ್ಲ್ಯೂ-2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಪ್ರೇಮಾವತಿ ರವರ ವಿಚಾರಣೆಯಲ್ಲಿ ಹಾಗೂ ಸಂಗ್ರಹಿಸಿದ ದಾಖಲೆಗಳಲ್ಲಿ ಜಾಬ್ ಕಾರ್ಡ್ ನಂ.1303 ಇದ್ದು, ಅದರಲ್ಲಿ ಭೀಮಪ್ಪ, ಕಾಂತಮ್ಮ ಬಸಪ್ಪ, ಲಕ್ಷ್ಮೀಬಾಯಿ, ರವಿ ಮತ್ತು ಸೀತವ್ವ 8 ಸದಸ್ಯರ ಹೆಸರು ನಮೂದಿರುತ್ತದೆ. ಸದರಿಯವರು ಕಲ್ಕೇರಿಯಲ್ಲಿ ಅರಣ್ಯೀಕರಣ ಮತ್ತು ಬಿಂಜಲಬಾವಿ ಗ್ರಾಮದ ಸೇದುಬಾವಿಯಿಂದ ಸರಪಂಚರ ಮನೆಯವರೆಗೆ ರಸ್ತೆ ಸುಧಾರಣೆ ಮತ್ತು ಬಿಂಜಲಬಾವಿ ಗ್ರಾಮದ ಗಿರೆಮ್ಮ ಇವರ ಮನೆಯಿಂದ ನ್ಯಾಯ ಬೆಲೆ ಅಂಗಡಿಯವರೆಗೆ ರಸ್ತೆ ಕಾಮಗಾರಿ ಕೈಗೊಂಡ ಬಗ್ಗೆ ದಾಖಲೆಗಳಲ್ಲಿ ನಮೂದಿದ್ದು, ಆದರೆ, ಸದರಿಯವರು ತಮ್ಮ ಹೇಳಿಕೆಯಲ್ಲಿ ಈ ಕಾಮಗಾರಿಗಳನ್ನು ಕೂಲಿಕಾರರಾಗಿ ಕೆಲಸ ಮಾಡಿದ ಬಗ್ಗೆ ಯಾವುದೇ ಮಾಹಿತಿ ತಿಳಿಸಿರುವುದಿಲ್ಲ. ಸದರಿ ಕಾಮಗಾರಿಗಳ ಕಡತಗಳನ್ನು ಗ್ರಾಮ ಪಂಚಾಯತಿ ಅಧಿಕಾರಿಗಳು ಸರಿಯಾಗಿ ನಿರ್ವಹಿಸಿರುವುದಿಲ್ಲ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪಡೆದುಕೊಂಡಿದ್ದು, ಪುಟ ಸಂ.106-170 ರವರೆಗೆ ***ನಿಶಾನೆ ಪಿ-14*** ಮತ್ತು ಪ್ರೇಮಾವತಿ ಮಾದರ್ ರವರ ಜಾಬ್ ಕಾರ್ಡ ಪುಟ ಸಂ. 27-34ರವರೆಗೆ ಇದ್ದು, ***ನಿಶಾನೆ ಪಿ-15*** ಎಂದು ಗುರುತಿಸಲಾಯಿತು. ನಮೂನೆ 6, 8ಮತ್ತು 9 ರಲ್ಲಿ ಸಂಬಂಧಪಟ್ಟವರ ರುಜು ಇರುವುದಿಲ್ಲ.

30. ಪಿಡಬ್ಲ್ಯೂ-2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ನಾಗಪ್ಪ ಮಾದರ್ ಇವರ ವಿಚಾರಣೆ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ, ಜಾಬ್ ಕಾರ್ಡ್ ನಂ.1304 ಇರುತ್ತದೆ ಸದರಿ

ದಾಖಲಾತಿ ಪುಟ ಸಂ.17-26 ***ನಿಶಾನೆ ಪಿ-16*** ಎಂದು ಗುರುತಿಸಲಾಯಿತು. ಆ ಜಾಬ್ ಕಾರ್ಡ್ ಭೀಮಾಬಾಯಿ, ರೇಣುಕಾ, ನಿಂಗಪ್ಪ, ಹುಲಿಗೆಮ್ಮ, ಮಡಿವಾಳಪ್ಪ, ಗೋಲಪ್ಪ ಮತ್ತು ಭಾಗೀರಥಿ 8 ಜನರ ಹೆಸರಿರುತ್ತದೆ. ನಾಗಪ್ಪ ಮಾದರ್ ಈತನು ತನ್ನ ಹೆಂಡತಿಯೊಂದಿಗೆ 4-5 ವರ್ಷಗಳಿಂದ ಮುಂಬೈಗೆ ದುಡಿಯಲಿಕ್ಕೆ ಹೋಗಿ ವಾಸವಿರುತ್ತಾರೆ ಎಂದು ತಿಳಿಸಿರುತ್ತಾರೆ. ಜಾಬ್ ಕಾರ್ಡ್‌ದಲ್ಲಿನ ಗೋಲಪ್ಪ, ಅಲಿಯಾಸ್ ಬಲ್ಲಾಳಪ್ಪ ಈತನ ಹೇಳಿಕೆ ಪಡೆದಿದ್ದು, ಸದರಿ ಆತನು ರೇಣುಕಾ, ನಿಂಗಪ್ಪ ಮತ್ತು ಹುಲಿಗೆಮ್ಮ ಮತ್ತುಮಡಿವಾಳಪ್ಪ ರವರುಗಳು ತನ್ನ ಅಣ್ಣ ಕಾಸಪ್ಪ ಮಾದರ್ ಈತನ ಮಕ್ಕಳು ಇರುವ ಬಗ್ಗೆ, ಹಾಗೂ ಕಾಸಪ್ಪ ಮಾದರ್ ಈತನು ಕಳೆದ 2 ವರ್ಷಗಳ ಹಿಂದೆ ಕಲ್ಕೇರಿ ಗ್ರಾಮ ಪಂಚಾಯತಿಯಲ್ಲಿ ಅಧ್ಯಕ್ಷನಾಗಿರುವ ಬಗ್ಗೆ ತಿಳಿಸಿರುತ್ತಾನೆ.ದಿ:16-07-2016ರಂದು ಮತ್ತು ದಿ: 29-07-2017ರಂದು ಗ್ರಾಮ ಪಂಚಾಯತಿಯಿಂದ ಪಿಡಿಓ ರವರಿಂದ ಮಾಹಿತಿ ಪತ್ರಗಳನ್ನುಸ್ವೀಕರಿಸಿರುತ್ತೇನೆ, ಸದರಿ ಪುಟ ಸಂಖ್ಯೆ 171-172 ಇದ್ದು, ***ನಿಶಾನೆ ಪಿ-17*** ಎಂದು ಗುರುತಿಸಲಾಗಿದೆ. ನಂತರ ಸಾಕ್ಷಿದಾರರ ಹೇಳಿಕೆಗಳು ಪುಟ ಸಂ.173-179ರವರೆಗೆ ಇದ್ದು, ***ನಿಶಾನೆ ಪಿ-18*** ಎಂದು ಗುರುತಿಸಲಾಗಿದೆ.

31. ಪಿಡಬ್ಲ್ಯೂ-2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ದಿ:30-07-2016ರಂದು ವಿಚಾರಣಾ ವರದಿಯನ್ನು ಸಲ್ಲಿಸಿದ್ದಾಗಿ ಸದರಿ ವರದಿಯನ್ನು ***ನಿಶಾನೆ ಪಿ-19*** ಎಂದು ಕಾಮಗಾರಿಗೆ ಸಂಬಂಧಿಸಿದ ಕಡತದಲ್ಲಿ ಕಾಮಗಾರಿಗಳ ಛಾಯಾ ಚಿತ್ರಗಳ ಬಗ್ಗೆ ಹಾಜರು ಮಾಡಿದ್ದು, ***ನಿಶಾನೆ ಪಿ-20*** ಎಂದು ಹಾಗೂ ಕಾಮಗಾರಿಗೆ ಸಂಬಂಧಪಟ್ಟಂತೆ ***ನಿಪಿ 20 ರಂತೆ*** ಸಿಡಿ ಹಾಜರು ಮಾಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ.

32. ಆಪಾದಿತ ಸರ್ಕಾರಿ ನೌಕರ **ಶ್ರೀ ಎಲ್.ಹೆಚ್. ನಾವಿ** ತಮ್ಮ ಪರವಾಗಿ ತಾವೇ **ಡಿ.ಡಬ್ಲ್ಯೂ-1** ಎಂದು ಸಾಕ್ಷ್ಯ ನುಡಿದಿದ್ದು ನಿ.ಡಿ-1 ದಾಖಲಾತಿಯನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತಾನು ಕಲಕೇರೆ ಗ್ರಾಮ ಪಂಚಾಯತಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ದಿನಾಂಕ 14/08/2013 ರಿಂದ 31/10/2014 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆಂದು ಸದರಿ ಅವಧಿಯಲ್ಲಿ ದೂರುದಾರರಾದ ಶ್ರೀ ಅಮರೇಶ್ ಬಿನ್ ಶಿವಲಿಂಗಪ್ಪ ದೇಸಾಯಿ ಬಿಂಜಲಬಾವಿ ಸಿಂದಗಿ ತಾಲ್ಲೂಕು,

ವಿಜಯಪುರ ಜಿಲ್ಲ ರವರು ಲೋಕಾಯುಕ್ತ ಸಂಸ್ಥೆಗೆ ದೂರು ಸಲ್ಲಿಸಿ 13ನೇ ಹಣಕಾಸು ಮತ್ತು ನರೇಗಾ ಯೋಜನೆಯಲ್ಲಿ ಹಣ ದುರುಪಯೋಈಗ ಮತ್ತು ಕರ್ತವ್ಯ ಲೋಪ ಎಸಗಿರುತ್ತೀರೆಂದು ದೂರು ಸಲ್ಲಿಸಿದ್ದು, ತಾವು ಯಾವುದೇ ಕರ್ತವ್ಯ ಲೋಪವೆಸಗಿರುವುದಿಲ್ಲವೆಂದು ತಮ್ಮ ಲಿಖಿತವಾದವನ್ನು ಸಲ್ಲಿಸಿರುತ್ತಾರೆ.

33. ದೂರುದಾರರ ದೂರು, ಪಿ.ಡಬ್ಲ್ಯೂ–1 ಮತ್ತು ಪಿ.ಡಬ್ಲ್ಯೂ–2 (ತನಿಖಾಧಿಕಾರಿ) ಯವರುಗಳ ಸಾಕ್ಷ್ಯ ನಿ.ಪಿ–1 ರಿಂದ 20 ರ ದಾಖಲಾತಿಗಳು ಹಾಗೂ ಡಿ.ಡಬ್ಲ್ಯೂ–1 ರವರ ಸಾಕ್ಷ್ಯ ನಿ.ಡಿ–1 ರ ದಾಖಲಾತಿ ಹಾಗೂ ಕಡತದಲ್ಲಿರುವ ದಾಖಲಾತಿಗಳನ್ನು ಕೂಲಂಕುಶವಾಗಿ ಪರಿಶೀಲನೆ ಮಾಡಿರುತ್ತೇನೆ.

34. ಆಪಾದಿತ ಸರ್ಕಾರಿ ನೌಕರರು 2013–14ನೇಸಾಲಿನ ಕಲಕೇರಿ ಗ್ರಾಮ ಪಂಚಾಯತಿಯ ನರೇಗಾ ಯೋಜನೆಯಡಿ 7 ಅಂಶಗಳ ವಿಶೇಷ ಕ್ರಿಯಾ ಯೋಜನೆಯಡಿ ಶ್ರೀ ಜಟ್ಟಪ್ಪ ರವರ ಜಮೀನಿನಲ್ಲಿ ಭೂಮಿ ಅಭಿವೃದ್ಧಿಗಾಗಿಗೆ ಸಂಬಂಧಿಸಿದಂತೆ, ದೂರುದಾರರ ತಮ್ಮ ಸಾಕ್ಷ್ಯದಲ್ಲಿ ಭೂಮಿ ಅಭಿವೃದ್ಧಿಗಾಗಿ ಖರ್ಚು ಮಾಡಿರುವ ಬಗ್ಗೆ ಅಳತೆ ಪುಸ್ತಕದಲ್ಲಿ ಯಾವುದೇ ಸಹಿ ಕಂಡು ಬಂದಿರುವುದಿಲ್ಲವೆಂದು, ಶ್ರೀ ಹಿರೇಣ್ಣ ಝಳಕಿ ರವರು ಮೃತ ಹೊಂದಿದ್ದು ಅವರ ಹೆಸರನ್ನು ಎನ್.ಎಮ್.ಆರ್ ನಲ್ಲಿ ತೋರಿಸಿದ್ದು, ಶ್ರೀ ಸಿದ್ದಣ್ಣ ಅಸ್ಕಿ, ಉಜ್ಜಿಂದ್ರ ಟಕ್ಕಾಪುರ, ಉಮಾಶ್ರೀ, ಶಿವಣ್ಣ ಬಾದಲ್ ನರೇಗಾದಲ್ಲಿ ಕೂಲಿ ಕೆಲಸ ಮಾಡದಿದ್ದರೂ ಅವರ ಬ್ಯಾಂಕ್ ಖಾತೆಗೆ ಹಣ ಸಂದಾಯವಾಗಿರುತ್ತದೆವೆಂದು ಸಾಕ್ಷ್ಯ ನುಡಿದಿದ್ದು, ಪಿಡಬ್ಲ್ಯೂ–2 ತನಿಖಾಧಿಕಾರಿಯವರು ತಮ್ಮ ಸಾಕ್ಷ್ಯದಲ್ಲಿ ಜಟ್ಟಪ್ಪ ಇವರ ಕೃಷಿ ಹೊಂಡದ ಕಾಮಗಾರಿಗೆ ಸಂಬಂಧಿಸಿದಂತೆ, ತಾನು ತನಿಖೆಯಲ್ಲಿ ಪಡೆದುಕೊಂಡ ದಾಖಲೆಗಳನ್ನು ನೋಡಿದ್ದು, ***ನಿಶಾನೆ ಪಿ–8*** ರಲ್ಲಿ ಸಂಖ್ಯೆ 36–ಕಾಮಗಾರಿ ಪೂರ್ಣ ಗೊಂಡ ಪ್ರಮಾಣಪತ್ರಕ್ಕೆ ಜಲಾನಯನ ಅಧಿಕಾರಿಯ ಸಹಿ ಇರುವುದಿಲ್ಲ. ಇದೇ ಕಾಮಗಾರಿಗೆ ಸಂಬಂಧಿಸಿದಂತೆ ಅಳತೆ ಪುಸ್ತಕ ಪುಟ ಸಂಖ್ಯೆ–38 ಮತ್ತು 47, ನಮೂನೆ–6 ಕೆಲಸಕ್ಕಾಗಿ ಅರ್ಜಿಯಲ್ಲಿ ಸಂಬಂಧಿಸಿದ ಅಧಿಕಾರಿಗಳ ರುಜು ಇರುವುದಿಲ್ಲವೆಂದು ಸಾಕ್ಷ್ಯ ನುಡಿದಿದ್ದು, 2013–14

ನೇ ಸಾಲಿನ ಕಲಕೇರಿ ಗ್ರಾಮ ಪಂಚಾಯತಿಯ ನರೇಗಾ ಯೋಜನೆಯಡಿ ಶ್ರೀ ಜಟ್ಟಪ್ಪ ರವರ ಜಮೀನಿನಲ್ಲಿ ಭೂಮಿ ಅಭಿವೃದ್ಧಿ ಕಾಮಗಾರಿ ಕೈಗೊಂಡಿರುವುದಾಗಿ ದಾಖಲೆಗಳಲ್ಲಿ ತೋರಿಸಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಕೆಲಸ ನಿರ್ವಹಿಸದೇ ಇರುವ ಕೂಲಿ ಕಾರ್ಮಿಕರ ಹೆಸರಿನಲ್ಲಿ ಎನ್.ಎಂ.ಆರ್. ಗಳನ್ನು ಸೃಷ್ಟಿಸಿ ಹಣ ದುರುಪಯೋಗಪಡಿಸಿಕೊಂಡಿರುವುದು ವಿಚಾರಣೆಯಿಂದ ಸಾಬೀತಾಗಿರುತ್ತದೆ.

35. ಇನ್ನು ಸಿಂದಗಿ ತಾಲ್ಲೂಕಿನ ಬಿಂಜಲಬಾವಿ ಗ್ರಾಮದಲ್ಲಿ ಶ್ರೀ ರಾಮನಗೌಡ ಹೊಸಗೌಡರ ಇವರ ಹೊಲದಿಂದ ಶ್ರೀ ಆನಂದ ಗೌಡ ಇವರ ಹೊಲದವರೆಗೆ ರಸ್ತೆ ಸುಧಾರಣೆ ಕಾಮಗಾರಿಗೆ ಸಂಬಂಧಿಸಿದಂತೆ, ಪಿಡಬ್ಲ್ಯೂ-1 ದೂರುದಾರರು ತಮ್ಮ ಸಾಕ್ಷ್ಯದಲ್ಲಿ, ನಮೂನೆ-6 ರಲ್ಲಿ ಗ್ರಾಮ ಪಂಚಾಯತಿಯ ಯಾವುದೇ ಅಧಿಕಾರಿಯ ಸಹಿ ಇರುವುದಿಲ್ಲ, ಕೂಲಿಕಾರರಿಗೆ ಅವರ ಬ್ಯಾಂಕ್ ಖಾತೆಗೆ ಹಣ ಸಂದಾಯ ಮಾಡಿರುವ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ, ಕೂಲಿ ಕಾರ್ಮಿಕರ ಮಸ್ಟರ್ ರೋಲ್‌ನ್ನು ದೂರನ್ನು ಸಲ್ಲಿಸಿದ ನಂತರ ತಯಾರಿಸಿರುವುದು ಕಂಡು ಬರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಪಿಡಬ್ಲ್ಯೂ-2 ತನಿಖಾಧಿಕಾರಿಯವರು ತಮ್ಮ ಸಾಕ್ಷ್ಯದಲ್ಲಿ, ಇದರಲ್ಲಿ 2 ಬಾರಿ ತಲಾ 6,876/- ರೂಗಳ ಕೂಲಿ ಹಣ ಪಾವತಿ ಮಾಡಿದ ಬಗ್ಗೆ ನಮೂದು ಇರುವುದಾಗಿ, ಸದರಿ ಕಾಮಗಾರಿ ಮುಕ್ತಾಯಗೊಂಡ ಪ್ರಮಾಣ ಪತ್ರಕ್ಕೆ ಸಂಬಂಧಿಸಿದ ಅಧಿಕಾರಿಯ ರುಜು ಇರುವುದಿಲ್ಲವೆಂದು, ನಮೂನೆ-6ಕ್ಕೆ ಪಂಚಾಯಿತಿ ಅಧಿಕಾರಿಗಳ ಸಹಿ ಇರುವುದಿಲ್ಲವೆಂದು ಸದರಿ ಕಾಮಗಾರಿಗೆ ಸಂಬಂಧಿಸಿದ ದಾಖಲೆಗಳು ನಿ.ಪಿ-ಸ9 ಆಗಿದ್ದು, ಸಿಂದಗಿ ತಾಲ್ಲೂಕಿನ ಬಿಂಜಲಬಾವಿ ಗ್ರಾಮದಲ್ಲಿ ಶ್ರೀ ರಾಮನಗೌಡ ಹೊಸಗೌಡರ ಇವರ ಹೊಲದಿಂದ ಶ್ರೀ ಆನಂದ ಗೌಡ ಇವರ ಹೊಲದವರೆಗೆ ರಸ್ತೆ ಸುಧಾರಣೆ ಕಾಮಗಾರಿ ಕೈಗೊಂಡಿರುವುದಾಗಿ ದಾಖಲೆಗಳಲ್ಲಿ ತೋರಿಸಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಕೆಲಸ ನಿರ್ವಹಿಸದೇ ಇರುವ ಕೂಲಿ ಕಾರ್ಮಿಕರ ಹೆಸರಿನಲ್ಲಿ ಎನ್.ಎಂ.ಆರ್. ಗಳನ್ನು ಸೃಷ್ಟಿಸಿ ಹಣ ದುರುಪಯೋಗಪಡಿಸಿಕೊಂಡಿರುವುದು ವಿಚಾರಣೆಯಿಂದ ಸಾಬೀತಾಗಿರುತ್ತದೆ.

36. ಇನ್ನು ಬಿಂಜಲಬಾವಿ ಗ್ರಾಮದ ಶ್ರೀ ಭೀಮಪ್ಪ ರಾಮಪ್ಪ ಮಾದರ ಇವರ ಹೊಲದಲ್ಲಿ ದನದ ಶೆಡ್ ನಿರ್ಮಾಣ ಕಾಮಗಾರಿಯನ್ನು ಫಲಾನುಭವಿಯಾದ ಶ್ರೀ ಹೀರಣ್ಣ ಶಿವಬಸಪ್ಪ ಐಳಕಿ ಅವರು ತನ್ನ ಜಾಬ್ ಕಾರ್ಡಿನಲ್ಲಿ 5 ಜನರ ಹೆಸರನ್ನು ತೋರಿಸಿದ್ದು, ಅದರಲ್ಲಿ ತಮ್ಮ ಪತ್ನಿ ಪುಷ್ಪಾವತಿ ಮತ್ತು ತಮ್ಮನಾದ ಬಸವರಾಜು ಅವರ ಹೆಸನ್ನು ಬರೆಯಲಾಗಿದ್ದು, ಇನ್ನೂಳಿದ ಮೂರು ಜನ ಸದಸ್ಯರು ಶ್ರೀಮತಿ ಬೋರಮ್ಮ, ಶ್ರೀಮತಿ ಮಲ್ಲು ಹಾಗೂ ಶ್ರೀಮತಿ ಸುವರ್ಣ ಇವರು ಆತನ ಕುಟುಂಬಕ್ಕೆ ಸೇರಿರುವುದಿಲ್ಲ. ಶ್ರೀ ಶಿವಬಸಪ್ಪ ಝಳಕಿ ರವರು ತಾವು ನಿರ್ವಹಿಸಿದ ಕಾಮಗಾರಿಯ ಕೆಲಸದ ಬಗ್ಗೆ ತಿಳಿಸಿದ್ದು, ಸದರಿ ಕೆಲಸವು ಅವರು ಮಾಡಿದ ಕೆಲಸಕ್ಕೂ ಹಾಗೂ ದಾಖಲೆಯಲ್ಲಿ ಇರುವ ಕೆಲಸಕ್ಕೆ ವ್ಯತ್ಯಾಸವಿರು ಬಗ್ಗೆ, ಪಿಡಬ್ಲ್ಯೂ–1 ದೂರುದಾರರು ತಮ್ಮ ಸಾಕ್ಷ್ಯದಲ್ಲಿ ಬಿಂಜಲಬಾವಿ ಗ್ರಾಮದ ಶ್ರೀ ಭೀಮಪ್ಪ ರಾಮಪ್ಪ ಮಾದರ ಇವರ ಹೊಲದಲ್ಲಿ ದನದ ಶೆಡ್ ನಿರ್ಮಾಣ ಕಾಮಗಾರಿಯನ್ನು ಫಲಾನುಭವಿಯಾದ ಶ್ರೀ ಹೀರಣ್ಣ ಶಿವಬಸಪ್ಪ ಝಳಕಿ ಅವರು ತನ್ನ ಜಾಬ್ ಕಾರ್ಡಿನಲ್ಲಿ 5 ಜನರ ಹೆಸರನ್ನು ತೋರಿಸಿದ್ದು, ಅದರಲ್ಲಿ ತಮ್ಮ ಪತ್ನಿ ಪುಷ್ಪಾವತಿ ಮತ್ತು ತಮ್ಮನಾದ ಬಸವರಾಜು ಅವರ ಹೆಸರನ್ನು ಬರೆಯಲಾಗಿದ್ದು ಇನ್ನುಳಿದ ಮೂರು ಜನ ಸದಸ್ಯರು ಶ್ರೀಮತಿ ಬೋರಮ್ಮ, ಶ್ರೀಮತಿ ಮಲ್ಲು ಹಾಗೂ ಶ್ರೀಮತಿ ಸುವರ್ಣ ಅವರ ಹೆಸರಿಗೆ ತೋರಿಸಿ ಹಣವನ್ನು ಸಂದಾಯ ಮಾಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಪಿಡಬ್ಲ್ಯೂ–2 ತನಿಖಾಧಿಕಾರಿಯವರು ತಮ್ಮ ಸಾಕ್ಷ್ಯದಲ್ಲಿ ನಮೂನೆ 6 ರಲ್ಲಿ ಪಂಚಾಯತಿ ಅಧಿಕಾರಿ ರುಜು ಕಂಡು ಬಂದಿರುವುದಿಲ್ಲ, ಅಳತೆ ಪುಸ್ತಕದಲ್ಲಿ ಸಂಬಂಧಪಟ್ಟ ಅಧಿಕಾರಿಯ ರುಜು ಇರುವುದಿಲ್ಲ, ಸದರಿ ಕಾಮಗಾರಿಯು 2013–14ನೇ ಸಾಲಿನ ನರೇಗಾ ಯೋಜನೆಗೆ ಸಂಬಂಧಿಸಿದ್ದು, ಕೂಲಿಕಾರರ ಬ್ಯಾಂಕ್ ಖಾತೆಗೆ ಕೂಲಿ ಹಣ ಸಂದಾಯವಾದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಈರಣ್ಣ ಝುಳ್ಕಿ ರವರು ತಮ್ಮ ಹೇಳಿಕೆಯಲ್ಲಿ ಸದರಿರವರ ಜಾಬ್ ಕಾರ್ಡ್‌ನಲ್ಲಿರುವ ಬೋರಮ್ಮ, ಮಲ್ಲು, ಸುವರ್ಣ ಎಂಬುವವರು ಯಾರು ಎಂಬುದು ತನಗೆ ಗೊತ್ತಿಲ್ಲ ಅಲ್ಲದೆ ಅವರು ನಮ್ಮ ಕುಟುಂಬದ ಸದಸ್ಯರಲ್ಲ ಎಂದು ಹೇಳಿಕೆ ಕೊಟ್ಟಿದ್ದು, ಆಪಾದಿತ ಸರ್ಕಾರಿ ನೌಕರರು ಸುಳ್ಳು ಹೆಸರಿನ ಜಾಬ್ ಕಾರ್ಡ್ ಸೃಷ್ಟಿಸಿರುವುದು ವಿಚಾರಣೆಯಿಂದ ಸಾಬೀತಾಗಿರುತ್ತದೆ.

37. ಪಿಡಬ್ಲ್ಯೂ-2 ರವರ ಸಾಕ್ಷ್ಯದಲ್ಲಿ ಶ್ರೀಮತಿ ಹಸನಸ ಅಲಿಸ ಮುಜಾವರ ಇವರ ಜಮೀನಿನಲ್ಲಿ ಕೃಷಿ ಹೊಂಡ ನಿರ್ಮಾಣ ಕಾಮಗಾರಿ (2) ಸಿಂಧಗಿ ತಾಲ್ಲೂಕಿನ ಬಿಂಜಲಬಾವಿ ಗ್ರಾಮದಲ್ಲಿ ಶ್ರೀ ರಾಮನಗೌಡ ಹೊಸ ಗೌಡರ ಇವರ ಹೊಲದಿಂದ ಆನಂದ ಗೌಡ ಹೊಲದವರೆಗೆ ರಸ್ತೆ ಸುಧಾರಣಾ ಕಾಮಗಾರಿ (3) ಸಿಂಧಗಿ ತಾಲ್ಲೂಕಿನ ಬಿಂಜಲಬಾವಿ ಗ್ರಾಮದಲ್ಲಿ ಬಸನಗೌಡರ ಹೊಲದಿಂದ ಊರಿನ ಗೌಡರ ಹೊಲದವರೆಗೆ ರಸ್ತೆ ಸುಧಾರಣೆ ಕಾಮಗಾರಿ ಇವುಗಳನ್ನು ಕೈಗೊಳ್ಳಲಾಗಿದ್ದು, ಸದರಿ ಕಾಮಗಾರಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ, ನಮೂನೆ 9 ಹಾಗೂ ಕೆಲಸಕ್ಕೆ ವರದಿ ಮಾಡಿಕೊಳ್ಳುವ ನೋಟೀಸ್ ನಮೂನೆ 6 ಮತ್ತು 8 ಇದ್ದು, ಅವುಗಳಿಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಸಹಿ ಮಾಡಿರುವುದಿಲ್ಲವೆಂದು ಕಾಮಗಾರಿ ಆದೇಶದ ಪತ್ರ ಹಾಗೂ ಕಾಮಗಾರಿ ಮುಕ್ತಾಯಗೊಂಡ ಪ್ರಮಾಣ ಪತ್ರಗಳಿಗೆ ಸಹ ಕಾರ್ಯನಿರ್ವಾಹಣಾ ಏಜೆನ್ಸಿಯ ಅಥವಾ ಜಲಾನಯನ ಇಲಾಖೆಯ ಯಾವುದೇ ಅಧಿಕಾರಿಯ ಸಹಿ ಇರುವುದಿಲ್ಲವೆಂದು ಹಾಗೆಯೇ ಕಡತದಲ್ಲಿ ಎಂಐಎಸ್ ಶೀಟ್ ಕಾಮಗಾರಿಯ ಮೂರು ಹಂತದ ಛಾಯಾಚಿತ್ರಗಳು, ಎಫ್ ಅಂಡ್ ಎಫ್ ಬಿಲ್ಲುಗಳು ಇದ್ದು, ಇವುಗಳ ಪ್ರತಿಗಳು ಲಭ್ಯವಿರುವುದಿಲ್ಲ ಹಾಗೆಯೇ ಕೂಲಿಕಾರರಿಗೆ ಅವರ ಬ್ಯಾಂಕ್ ಖಾತೆಗೆ ಹಣ ಸಂದಾಯ ಮಾಡಿರುವ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ. ಅಳತೆ ಪುಸ್ತಕದ ಪ್ರತಿಯನ್ನು ಪರಿಶೀಲಿಸಲಾಗಿ ಸದರಿ ಅಳತೆ ಪುಸ್ತಕಕ್ಕೆ ಯಾವುದೇ ಅಧಿಕಾರಿಯು ಸಹಿ ಮಾಡಿರುವುದಿಲ್ಲ. ಮೇಲೆ ಹೇಳಿದ ಶ್ರೀ ಮುಜಾವರ್ ರವರ ಜಮೀನಿನ ಕೃಷಿ ಹೊಂಡದ ಕಾಮಗಾರಿಗೆ ಸಂಬಂಧಿಸಿದ ಅಳತೆ ಪುಸ್ತಕವನ್ನು ಹಾಜರುಪಡಿಸಿದ್ದು, ಫಲಾನುಭವಿಯಾದ ಶ್ರೀ ಸಿದ್ದಣ್ಣ ಸುಬ್ಬಣ್ಣ ಅಸ್ಕಿ ಇವರನ್ನು ವಿಚಾರಣೆ ಮಾಡಲಾಗಿದ್ದು, ತಮ್ಮ ಜಾಬ್ ಕಾರ್ಡಿನಲ್ಲಿ ಇರುವ ಹೆಸರುಗಳಾದ ಶ್ರೀಮತಿ ರೇಣುಕಾ ಮತ್ತು ಶ್ರೀಮತಿ ಅನ್ನಪೂರ್ಣ ತಮಗೆ ಗೊತ್ತಿಲ್ಲವೆಂದು ಹಾಗೂ ತಮ್ಮ ಕುಟುಂಬದ ಸದಸ್ಯರಲ್ಲವೆಂದು ಹೇಳಿಕೆ ನೀಡಿದ್ದು, ಇದಲ್ಲದೇ, ಶ್ರೀ ಸಿದ್ದಣ್ಣ ಅಸ್ಕಿಯವರು 15 ವರ್ಷಗಳಿಂದ ಕೇಸರಟ್ಟಿ ಗ್ರಾಮದಲ್ಲಿ ಸಾರ್ವಜನಿಕರಿಗೆ ಪ್ರಥಮ ಚಿಕಿತ್ಸೆ ನೀಡುವ ಕೆಲಸ ನಿರ್ವಹಿಸುತ್ತಿರುವುದಾಗಿಯೂ, ತಮ್ಮ ಪತ್ನಿ ಶೀಲಾ ಇವರು ಎಂ.ಎ ಬಿ.ಎಡ್ ಓದಿ, ಮನೆ ಕೆಲಸ ಮಾಡುತ್ತಿರುವುದಾಗಿಯೂ, ತಮ್ಮ ತಂಗಿ ನಾಗಮ್ಮ ಮುದ್ದೇಬಿಹಾಳದಲ್ಲಿ ವಾಸವಿರುವುದಾಗಿಯೂ ಮತ್ತು ಶ್ರೀ ಉಮೇಶ್ ಇವರು ತಮ್ಮ ಪತ್ನಿಯೊಂದಿಗೆ 7-8 ವರ್ಷದಿಂದ ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಕೆಲಸ ಮಾಡಿಕೊಂಡಿರುತ್ತಾರೆಂದು ತಿಳಿಸಿರುತ್ತಾರೆ. ಆದರೆ, ಇವರುಗಳು ಕೂಲಿ ಕಾರ್ಮಿಕರಾಗಿ ಮೇಲೆ ಹೇಳಿದ ಕಾಮಗಾರಿಗಳಲ್ಲಿ ಕೆಲಸ ಮಾಡಿರುವುದಾಗಿ ದಾಖಲೆಗಳಲ್ಲಿ ತೋರಿಸಲಾಗಿದ್ದು, ಆಪಾದಿತ ಸರ್ಕಾರಿ ನೌಕರರು 2012-13, 2013-14ನೇ ಸಾಲಿನ ನರೇಗಾ

ಯೋಜನೆಯಡಿಯಲ್ಲಿ ಹಾಗೂ 13ನೇ ಹಣಕಾಸಿನ ಅನುದಾನದ ಅಡಿಯಲ್ಲಿ ಹಲವಾರು ಕಾಮಗಾರಿಗಳನ್ನು ಕೈಗೊಂಡಿದ್ದಾಗಿ ದಾಖಲೆಗಳಲ್ಲಿ ತೋರಿಸಿ, ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಕೆಲಸ ನಿರ್ವಹಿಸದೇ ಇರುವ ಕೂಲಿ ಕಾರ್ಮಿಕರ ಹೆಸರಿನಲ್ಲಿ ಎನ್.ಎಂ.ಆರ್ ಗಳನ್ನು ಸೃಷ್ಟಿಸಿ ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ವಿಚಾರಣೆಯಿಂದ ಸಾಬೀತಾಗಿರುತ್ತದೆ. ಆದ್ದರಿಂದ, ಆಪಾದಿತ ಸರ್ಕಾರಿ ನೌಕರರ ವಿರುದ್ಧ ದೋಷಾರೋಪಣೆಯಲ್ಲಿ ಮಾಡಿರುವ ಆಪಾದನೆಯನ್ನು **ಶಿಸ್ತುಪ್ರಾಧಿಕಾರಿಗಳು ಸಾಭೀತುಪಡಿಸುವಲ್ಲಿ ಸಫಲವಾಗಿರುತ್ತದೆ.**

**ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ವಿಚಾರಣಾ ವರದಿ ಸಲ್ಲಿಸಲಾಗಿದೆ.**

**: ವಿಚಾರಣಾ ವರದಿ :**

ಶಿಸ್ತು ಪ್ರಾಧಿಕಾರವು ಆಪಾದಿತ ಸರ್ಕಾರಿ ನೌಕರ **ಶ್ರೀ ಎಲ್.ಹೆಚ್. ನಾವಿ,** ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಲಕೇರಿ ಗ್ರಾಮ ಪಂಚಾಯತಿ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ ರವರ ವಿರುದ್ಧದ ದೋಷಾರೋಪಣೆ ಯಲ್ಲಿ ಮಾಡಲಾದ ಆಪಾದನೆ ಗಳನ್ನು **ರುಜುವಾತು ಪಡಿಸುವಲ್ಲಿ ಸಫಲರಾಗಿರುತ್ತಾರೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–1 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

**11ನೇ ಮಾರ್ಚ 2022.**

(ಜಿ. ನಂಜುಂಡಯ್ಯ)
ಅಪರ ನಿಬಂಧಕರು ವಿಚಾರಣೆಗಳು–10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

| | |
|---|---|
| **LIST OF WITNESS EXAMINED ON BEHALF OF DISCIPLINARY AUTHORITY :** | |
| PW-1 : Sri. Amaresh Desai(Complainant) (original) | |
| PW-2 : Sri Nandeeshwara Kumbar, Police Inspector, Karnataka Lokayukta, Vijayapura (Investigation Officer) (original) | |
| **LIST OF WITNESS EXAMINED ON BEHALF OF DEFENSE :** | |
| DW-1 : L.H. Navi (DGO) - (original) | |
| **LIST OF EXHIBITS MARKED ON BEHALF OF DISCIPLINARY AUTHORITY :** | |
| Ex.P.1 : | Complaint of the complainant (original) |
| Ex.P.2 : | Form No.I dated 01/08/2014 - (original) |
| Ex.P.3 : | Form No. II (Affidavit) dated 01/08/2014 (original) |
| Ex.P.4 : | 2 photographs (original) |
| Ex.P.5 : | Beneficiaries list (Original) |
| Ex.P.6 : | Rejoinder of the complainant dated 22/06/2015 (Original) |
| Ex.P.7 : | Documents pertaining to Sri. Eranna Jalaki (Xerox) |
| Ex.P.8 : | Certified Xerox documents pertains to Jattappa regarding Agriculture pond. (Certified Xerox) |
| Ex.P.9 | Certified Xerox documents pertains to development of road work of Binjalabhavi Village from Ramanagowda Hosgowdru land to Anandgowda land. (Certified Xerox) |
| Ex.P.10: | documents pertains to Sri. Siddanna Aski enquiry ( Xerox) |
| Ex.P.11: | Certified copy of the documents pertains to the land of Hassn Sab Mujavar Construction of Agiriculture Pond and in Binjalabhavi |

| | |
|---|---|
| | village from the land of Basanagouda to village road developmental works (Certified Xerox copy) |
| Ex.P.12: | Xerox copy of the documents pertains to Smt. Neelamma Byalal (Xerox) |
| Ex.P.13: | Xerox copy of the documents pertains to Smt. Parvatti Tokapur (Xerox) |
| Ex.P.14: | Certified copy of the documents pertains to Smt. Premavathi (Certified Xerox copy) |
| Ex.P.15: | Xerox copy of the documents pertains to Smt. Premavathi Madar Xerox) |
| Ex.P.16: | Xerox copy of the documents pertains to Sri Nagappa Madar (Xerox) |
| Ex.P.17: | Information regarding President and PDOs work in Kalakeri Grama Panchayath (Original) |
| Ex.P.18: | Statements of witnesses (Original) |
| Ex.P.19: | Investigation Officer report dated: 30-07-2016 (Original) |
| Ex.P. 20: | CD regarding Photos (Original) |
| **LIST OF EXHIBITS MARKED ON BEHALF OF DEFENSE:** | |
| Ex.D-1 : | Notification of Rural Development and Panchayath Secretariat dated: 01-02-2007 ( Xerox) |

Date of Retirement of DGO is **30-09-2021 (Already Retired).**

**11th March 2022**

**(G. NANJUNDAIAH)**
Additional Registrar (Enquiries)-10
Karnataka Lokayukta,
Bengaluru.

**GOVERNMENT OF KARNATAKA**

**KARNATAKA LOKAYUKTA**

No.UPLOK-1/DE/714/2016/ARE-10

Multi Storied Building,
Dr. B.R. Ambedkar Veedhi,
Bengaluru-560 001
Date: **14/03/2022**

## RECOMMENDATION

Sub:- Departmental inquiry against;
Sri L.H. Navi, Panchayath Development Officer,
Kalakeri Grama Panchayath, Sindagi Taluk,
Vijayapura District – Reg.

Ref:- 1) Govt. Order No. ಗ್ರಾಅಪ/756/ಗ್ರಾಪಂಕಾ/2016, Bengaluru dated 25/11/2016.

2) Nomination order No.UPLOK-1/DE/714/2016, Bengaluru dated 12/12/2016 of Upalokayukta-1, State of Karnataka, Bengaluru

3) Inquiry Report dated 11/03/2022 of Additional Registrar of Enquiries-10, Karnataka Lokayukta, Bengaluru

----

The Government by its order dated 25/11/2016 initiated the disciplinary proceedings against Sri L.H. Navi, Panchayath Development Officer, Kalakeri Grama Panchayath, Sindagi Taluk, Vijayapura District (hereinafter referred to as Delinquent Government Official, for short as DGO) and entrusted the Departmental Inquiry to this Institution.

2. This Institution by Nomination Order No.UPLOK-1/DE/714/2016 Bengaluru dated 12/12/2016 nominated Additional Registrar of Enquiries-10, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by him.

3. The sum and substance of the charges framed against DGO Sri L.H. Navi, Panchayath Development Officer, Kalakeri Grama Panchayath, Sindagi Taluk, Vijayapura District are as follows:-

> "In respect of the work of development of land of Sri Jattappa taken up under 7 Points Special Action Plan of MGNREGA Scheme for the year 2013-14, the measurement book does not bear the signature. The work completion certificate does not bear the signature of the officer of the Watershed Development Department. There is no record to show that the wages were credited to the account of the coolies. It is noticed that Eranna Zalaki and others have worked, but no records are found that the amount was credited to their account.
>
> In respect of the work of improvement of road from the land of Sri Ramanagouda Hosagoudar to the land of Sri Anandagouda, no signature of the Section officer, Panchayath Raj Engineering Sub Division, Sindagi is found on the completion certificate. There is no signature of Panchayath officers on Form No.6. There is no record for having credited the amount to the account of the wagers. It is noticed that the Muster Roll no.6096 in respect of the work was prepared after filing the complaint.
>
> In respect of construction of cattle shed in the land of Sri Bhimappa Ramappa Madar, one Sri Eranna Shivabasappa Zalaki has shown 5 workers' name in his job card, wherein apart from the name of his wife Smt. Pushpavathi and his brother Sri Basavaraju, the names of Smt. Boramma, Smt. Mallu and Smt. Suvarna are shown, who do not belong to his family. Further Sri Shivabasappa Zalaki has stated about the work carried out by him, which does not tally with the work shown in the records.
>
> In respect of the works of (1) formation of Krishi Honda in the land of Smt. Hasanasa Alisa Mujawar; (2) improvement of road from the land of Sri Ramanagouda Hosagoudar to the land of Anandagouda; (3) improvement of road from the land of Sri Basanagoudar to the land of Goudar, the Panchayath Development Officer has not affixed his signature on form No.9, 6, and 8. In the work completion

certificates, the signatures of executing agency or the officer of Watershed Development Department are not found. In the file, MIS sheets, photographs of 3 stages and F&F Bills were found, but the copies of the same are not found in the records. Records relating to amount credited to the account of the workers are not found. It is noticed that the work of improvement of road was taken up after the complaint was made. There is no signature of the officer in the measurement book. The names of Smt. Ranuka and Smt. Annapurna shown in the job card of Sri Siddanna Subbanna Aski are not the family members. Sri Siddanna Aski was doing the profession of giving first aid treatment to the public at Kesaratti village since last 15 years. His wife Smt. Sheela has completed MA. B.Ed course and was a house wife. His sister Smt. Nagamma is residing at Muddebihal and Sri Umesh is residing at Sangli, Maharashtra along with his wife since last 7 – 8 years. But they have not worked as coolie workers under MGNREGA Scheme.

Sri Muttappa, whose name is shown in the job card of Sri Shivappa Bylal was studying in 8th Standard. Smt. Renuka was married four years back and residing at Nagaral Village of Muddebihal Taluk.

As stated by the Complainant, the DGO has concocted the records showing that several works were executed under MGNREGA scheme during the years 2012-13 and 2013-14 and under the 13th Finance Scheme, drawn the amount in the names of workers who have not executed the work and concocted the NMRs in the names of coolie workers and thereby misappropriated the Government money.

4. The Inquiry Officer (Additional Registrar of Enquiries-10) on proper appreciation of oral and documentary evidence has held that the Disciplinary Authority has proved the above charges against DGO Sri L.H. Navi, Panchayath Development Officer, Kalakeri Grama Panchayath, Sindagi Taluk, Vijayapura District.

5. On re-consideration of inquiry report and taking note of the totality of the circumstances of the case, I do not find any reason to interfere with the findings recorded by the Inquiry Officer. It is hereby recommended to the Government to accept the report of Inquiry Officer.

6. As per the First Oral Statement submitted by DGO, he is due to retire from service on 30/6/2022.

7. Having regard to the nature of charges proved against DGO Sri L.H. Navi, Panchayath Development Officer, Kalakeri Grama Panchayath, Sindagi Taluk, Vijayapura District and taking into consideration the date of retirement of DGO on 30/6/2022 and the time required for passing final orders after issuing the second show cause notice, obtaining his reply on the same and considering his reply, it is hereby recommended to the Government for imposing penalty of withholding 10% of pension payable to DGO Sri L.H. Navi for a period of 5 years.

8. Action taken in the matter shall be intimated to this Authority.

Connected records are enclosed herewith.

14/3

**(JUSTICE B.S.PATIL)**
Upalokayukta,
State of Karnataka,
Bengaluru